

# ಬೆಟ್ಟಗುಡ್ಡಗಳ ಬೋಗುಣಿಯಲ್ಲಿ

ಎಂ. ವೆಂಕಟಸ್ವಾಮಿ

**ಕ್ರಾಂತಿ ಪ್ರಕಾಶನ**

ಮನೆ ಸಂಖ್ಯೆ : 427, ಮೊದಲನೆ ಮಹಡಿ
13ನೇ ಮುಖ್ಯ ರಸ್ತೆ, ಎಂ. ಸಿ. ಬಡಾವಣೆ
ವಿಜಯನಗರ, ಬೆಂಗಳೂರು - 40.

**BETTAGUDDAGALA BOGUNIYALLI**
A Collection of poems by VENKATASWAMY, M.Sc.,
KRANTHI PRAKASHANA, 427, Ist Floor, 13th Main
M. C. Layout, Vijayanagar, Bangalore - 560 040.

ಪ್ರಥಮ ಮುದ್ರಣ : 1996

ಕವಿ : ಎಂ. ವೆಂಕಟಸ್ವಾಮಿ

ಹಕ್ಕುಗಳು : ಸುಶೀಲ ವೆಂಕಟಸ್ವಾಮಿ

ಪ್ರತಿಗಳು : ಒಂದು ಸಾವಿರ

ಬೆಲೆ : **ರೂ. 35**

ಮುಖಪುಟ : ಸುದೇಶ ಮಹಾನ್

**ಕ್ರಾಂತಿ ಪ್ರಕಾಶನ**
ಮ. ಸ. 427, ಮೊದಲನೆ ಮಹಡಿ
13ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ
ವಿಜಯನಗರ, ಬೆಂಗಳೂರು - 40.

ಮುದ್ರಕರು :
**ರಶ್ಮಿ ಮುದ್ರಣ**
ಸುಧಾಮನಗರ
ಬೆಂಗಳೂರು - 27.

## ಅರ್ಪಣೆ

ಅಸ್ಪೃಶ್ಯತೆಯನ್ನು ತೊಡೆದುಹಾಕಲು
ಅಸ್ಪೃಶ್ಯರ ನಡುವೆ ಶ್ರಮಿಸಿದ, ಶ್ರಮಿಸುತ್ತಿರುವ
ಅಸ್ಪೃಶ್ಯರಿಗಿಂತ ಹೆಚ್ಚಾಗಿ ಅಸ್ಪೃಶ್ಯರಲ್ಲದ
ಮನುಷ್ಯರಿಗೆ.

# ನಿಮ್ಮೊಂದಿಗೆ

ನನ್ನ ಬಹಳ ವರುಷಗಳ ಆಸೆಯನ್ನು ಈ ಕವನ ಸಂಕಲನದ ಮುಖಾಂತರ ತೀರಿಸಿಕೊಂಡಿರುವ ಈ ಸಮಯದಲ್ಲಿ ನನ್ನ ಬಗ್ಗೆಯಾಗಲಿ ನನ್ನ ಕವನಗಳ ಬಗ್ಗೆಯಾಗಲಿ ಬರೆದುಕೊಳ್ಳುವುದು ನನಗೆ ಸುತರಾಂ ಇಷ್ಟವಿಲ್ಲದ ಕೆಲಸ. ಜೊತೆಗೆ ಗೆಳೆಯ ಕೋಟಿಗಾನಹಳ್ಳಿ ರಾಮಯ್ಯ ಬೆನ್ನುಡಿಯಲ್ಲಿ ಎಷ್ಟು ಬೇಕೊ ಅಷ್ಟನ್ನ ಬರೆದಿರುವುದರಿಂದ ಮಿಕ್ಕ ಕೆಲಸವನ್ನ ಪೂರ್ತಿಯಾಗಿ ನಿಮಗೆ ಬಿಟ್ಟಿದ್ದೀನಿ. ಆದರೆ ನಿಮ್ಮ ಜೊತೆ ನನ್ನ ಕವನಗಳು ಮಾತ್ರ ಮಾತನಾಡಲು ತಯಾರಾಗಿಯೇ ನಿಮ್ಮ ಕೈ ಸೇರಿರುವುದರಿಂದ ನೀವು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ! ಒಬ್ಬ ಪತ್ರಕರ್ತ ಯಾವಾಗಲೊ ಒಂದು ಮಾತು ಕೇಳಿದ್ದು ನನಗೆ ಈಗಲೂ ಜ್ಞಾಪಕವಿದೆ. ''ನಮ್ಮ ಪತ್ರಿಕೆ, ಪುಸ್ತಕಗಳನ್ನು ಯಾರೂ ಕೊಂಡು ಓದುವುದಿಲ್ಲ ಎಂದೂ ಎಲ್ಲರೂ ದೂರುತ್ತಾರೆ. ಆದರೆ ನೀವು, ಅವರು ಓದುವ ತರಹ ಬರೆಯುತ್ತಿದ್ದೀರಾ ?'' ಎಂದು. ನನಗೂ ನನ್ನ ಕವನಗಳ ಬಗ್ಗೆ ಬಹಳಾನೆ ಗುಮಾನಿ ಇದೆ. ಅವರು ಕೇಳಿದ ಪ್ರಶ್ನೆಗೆ ಶೇಕಡ ಹತ್ತರಷ್ಟಾದರೂ ಉತ್ತರ ನನ್ನ ಕವನಗಳಲ್ಲಿ ಸಿಕ್ಕರೆ ಅಷ್ಟೇ ಸಾಕು, ನನ್ನ ಪ್ರಯತ್ನ ಸಫಲವಾಯಿತೆಂದೇ ತಿಳಿದುಕೊಳ್ಳುತ್ತೇನೆ. ಇನ್ನು, ನನ್ನ ಕವನಗಳಲ್ಲಿರುವ ಲೋಪದೋಷಗಳನ್ನ ಯಾರಾದರೂ ಚರ್ಚಿಸಿಯೋ ಪತ್ರಗಳ ಮುಖಾಂತರ ಬರೆದೋ ತಿಳಿಸಿದರೆ ಪ್ರೀತಿಯಿಂದ ತಿದ್ದಿಕೊಳ್ಳಲು ಪ್ರಯತ್ನಿಸುತ್ತೇನೆ.

ಈ ಕವನ ಸಂಕಲನದ ಪ್ರಸ್ತುತ ಪ್ರಕಟಣೆಯ ಸಂದರ್ಭದಲ್ಲಿ ನಾನು ನೆನೆಯಲೇ ಬೇಕಾಗಿರುವ ಕೆಲವರೆಂದರೆ ನನಗೆ ಜನ್ಮ ನೀಡಿದ ನನ್ನ ತಂದೆ ತಾಯಿ, ಅತ್ತೆ ಮಾವ, ಅಕ್ಷರ ಕಲಿಸಿ ಪ್ರೋತ್ಸಾಹಿಸಿದ ಸೋದರತ್ತೆ ಶ್ರೀಮತಿ ಪಾಪಮ್ಮ ನಾಗಭೂಷಣಂ, ಆಗ ಮೊದಮೊದಲು ಕನ್ನಡ ಅಕ್ಷರಗಳಲ್ಲಿ ಆಸೆ ಹುಟ್ಟಿಸಿ ಈಗ ಸೊಗಸಾದ ಬೆನ್ನುಡಿ ಬರೆದು, ಕವನಗಳನ್ನ ಆಯ್ದುಕೊಟ್ಟ ಬಹುಮುಖ ಪ್ರತಿಭೆಯ ಗೆಳೆಯ ಕೋಟಿಗಾನಹಳ್ಳಿ ರಾಮಯ್ಯ, ನನ್ನ ಮೊದಲ ಕವನ, ಲೇಖನಗಳನ್ನು ಪ್ರಕಟಿಸಿದ ಕೋಲಾರದ 'ಹೊನ್ನುಡಿ' ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರ 'ಪ್ರತಿಭಟನೆ ಕಾವ್ಯ'ದಲ್ಲಿ ನನ್ನ 'ಶತ ವರ್ಷಗಳ ಗತ ವೈಭವ' ಕವಿತೆಯನ್ನು ಪ್ರಕಟಿಸಿ, ''ಪ್ರಗತಿಪರ ದಲಿತ ಕವಿ'' ಎಂದು ಕರೆದು, ನನ್ನ ಆಸೆಗೆ ಇನ್ನಷ್ಟು ಉತ್ಸಾಹ ತುಂಬಿದ ಡಾ॥ ಸಿ. ವೀರಣ್ಣ, 'ಸಮುದಾಯ' ಪತ್ರಿಕೆಯಲ್ಲಿ ಕವನ, ವೈಚಾರಿಕ ಲೇಖನಗಳನ್ನು ತಾವೇ ಕೇಳಿ ಬರೆಸಿಕೊಂಡು ಪ್ರಕಟಿಸಿದ ಶ್ರೀ ಬರಗೂರು ರಾಮಚಂದ್ರಪ್ಪ, ಡಾ॥ ಸಿದ್ದಲಿಂಗಯ್ಯ, ಕವನ,

ಲೇಖನಗಳನ್ನ ಪ್ರಕಟಿಸಿದ 'ಪಂಚಮ' ಪತ್ರಿಕೆ, ಕಥೆ-ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದ 'ಸುದ್ದಿ ಸಂಗಾತಿ'ಯ ಗೆಳೆಯ ಇಂದೂಧರ ಹೊನ್ನಾಪುರ, 'ದಲಿತ ಕಾವ್ಯ'ದಲ್ಲಿ ಕವನ ಪ್ರಕಟಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಳಗ, ನನ್ನ ಕವನಗಳ ಬಗ್ಗೆ ಪ್ರೀತಿಯಿಂದ ಚರ್ಚಿಸಿ ''ಕಾವೇರಿ ಹರಿದು ಬಂದ ದಾರಿ'' ಪುಸ್ತಕದಲ್ಲಿ ಕವನ ಪ್ರಕಟಿಸಿದ ಸಹೋದ್ಯೋಗಿ ಮತ್ತು ಕವಿ ಮಿತ್ರ ಶ್ರೀ ಟಿ. ಆರ್ ಅನಂತರಾಮು, ಮಂಗ್ಳೂರು ವಿಜಯ, ಲಕ್ಷ್ಮಣ ಮತ್ತು ವಿವೇಕ್.

ಇದರ ಜೊತೆಗೆ ಒಂದಲ್ಲ ಒಂದು ರೀತಿಯಲ್ಲಿ ನನಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಶ್ರೀ ಎಸ್. ವಿ. ಜಿ. ಕೃಷ್ಣಾರಾವ್, ಟಿ. ಎಸ್. ಎಸ್. ಮೂರ್ತಿ, ಡಾ|| ಟಿ. ವಿ. ರಾಮಚಂದ್ರನ್, ಪ್ರೊ|| ಜಿ.ಎಚ್. ಸಾಹುಕಾರ್, ಶ್ರೀಮತಿ ಮತ್ತು ಶ್ರೀ ಪಿ. ಶ್ರೀನಿವಾಸಯ್ಯ, ಎ. ದೇವನ್, ಜಿ. ಗಂಗಪ್ಪ, ವಿ. ಮುನಿವೆಂಕಟಪ್ಪ, ಎಂ. ಎಂ. ಸ್ವಾಮಿ, ಆರ್. ಪಾಂಡುರಂಗ, ಆರ್. ಅನಂತನಾರಾಯಣ, ಎಸ್.ಆರ್.ಕೆ. ಶೆಟ್ಟಿ, ಎ. ಎಲ್. ಶಶಿಮೋಹನ್, ಬಿ. ಆಂಜನಪ್ಪ, ಕೆ. ಜನಾರ್ಧನ್, ಡಿ. ಡಿ. ರಾಜು, ಎನ್. ರಾಮರಾವ್, ಎ. ಟಿ. ಶ್ರೀನಿವಾಸನ್, ಎನ್. ಪ್ರಕಾಶ, ಕೆ. ವೆಂಕಟೇಶ, ಬಿ. ಪಿ. ರಾಮಯ್ಯ, ಪಿ. ವೆಂಕಟಸ್ವಾಮಿ, ಪಿ. ರಾಮಚಂದ್ರಪ್ಪ, ಪಿ. ನಾರಾಯಣಸ್ವಾಮಿ, ಎನ್. ಶಂಕರ್, ಜಯರಾಮ್, ಬಾಲು, ರವಿ, ಬಾಬು, ಎಂ.ವಿ. ಚಲಪತಿ ಇನ್ನೂ ಅನೇಕ ಗೆಳೆಯರು.

ಸಮಯ ಸಿಕ್ಕಿದಾಗ ಎಲ್ಲವನ್ನು ಮರೆತು ಪುಸ್ತಕ ಹಿಡಿದು ಕುಳಿತಿರುವಾಗ 'ಪುಸ್ತಕ ಸಿಕ್ಕರೆ ಸಾಕು, ನಾವೆಲ್ಲ ಜ್ಞಾಪಕಾನೆ ಇರುವುದಿಲ್ಲ' ಎಂದು ಹಂಗಿಸಿ ಸುಮ್ಮನೆ ಕುಳಿತಿರುವಾಗ 'ಯಾಕೆ, ಏನಾದರು ಬರೆದುಕೊಳ್ಳುವುದೊ.. ಓದುವುದೊ ಮಾಡಬಾರದೆ..' ಎಂದು ಎಚ್ಚರಿಸಿ ಒಂದೆರಡು ಕವನಗಳನ್ನ ಬರೆಯಲು ಪ್ರೇರಣೆಯಾದ ಪ್ರೀತಿಯ ಪತ್ನಿ ಶ್ರೀಮತಿ ಸುಶೀಲ ಮತ್ತು ಕ್ರಾಂತಿಗೆ.

ಕೊನೆಯದಾಗಿ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ರಶ್ಮಿ ಮುದ್ರಣದ ಶ್ರೀ ಎಂ. ರಾಮಕೃಷ್ಣ ನಾಯಿಡು, ಬಳಗದರರಿಗೆ, ಸೂಕ್ತವಾದ ಮತ್ತು ಸೊಗಸಾದ ಚಿತ್ರ ಬರೆದುಕೊಟ್ಟ ಕಲಾವಿದ ಶ್ರೀ ಸುದೇಶ್ ಮಹಾನ್‌ಗೆ ನನ್ನ ಕೃತಜ್ಞತೆಗಳು.

ಬೆಂಗಳೂರು ಎಂ. ವೆಂಕಟಸ್ವಾಮಿ

# ಒಳ ಪುಟಗಳಲ್ಲಿ

# ಶತ ವರ್ಷಗಳ ಗತ ವೈಭವ

ಇಗೋ ಆಚರಿಸುತ್ತಿರುವೆವು
ಶತ ವರ್ಷಗಳ ಗತ ವೈಭವ.... !
ಶತ ವರ್ಷಗಳಿಂದ ಮಣ್ಣು ಮುಕ್ಕಿದವರು
ನಾವು ಹತಭಾಗ್ಯರು.

ಸಾವಿರಾರು ಅಡಿಗಳ ಕೆಳಗೆ; ಆಳದೊಳಗೆ
ಪಾತಾಳದೊಳಗೆ; ನಿಮ್ಮ ಕೆಳಗೆ !
ತೆವಳಿ ತೆವಳಿ ಸವೆದವರು.

ಇಂದಿಗೂ ನಮ್ಮ ಹೊದಿಕೆ ಬಿದಿರು ದಟ್ಟಿಗಳು;
ಗರಿಗೆದರಿದ ಸಯೆನೈಡ್ ವಿಷ ಕಣಗಳು
ಮೈತೂರಿ ಉಸಿರುಗೂಡುಗಳ ಕುಕ್ಕುತ್ತಿವೆ.

ಮಳೆ ಇಲ್ಲದೆ ತೊಯ್ದವರು
ಗಾಳಿ ಇಲ್ಲದೆ ಉಸಿರಾಡುವವರು.

ಜೀವನವೆ ಕತ್ತಲ ಹೊತ್ತು ಹುಡುಕುತ್ತಿರುವೆವು
ಇನ್ನೂ ಬೆಳಕನ್ನು ಕಪ್ಪು ಸುರಂಗಗಳಲ್ಲಿ
ದೇಶದ ಪ್ರತಿಷ್ಠೆಗೆ ಪಾತ್ರರಾದ ನಾವು
ಅಂತರಾಳದ ನೋವ ಹೊತ್ತು, ಕಂದರದಲ್ಲಿರುವ
ನಮ್ಮ ರಕ್ತ ಎಲುಬುಗಳೆ
ನಿಮ್ಮ ಶೃಂಗಾರ ಎರಕವಾದ ಚಿನ್ನ !
ಬತ್ತಿ ಹೋದ ಪಿಳಿಪಿಳಿ ಕಣ್ಣುಗಳ ಹಿಗ್ಗಿಸಿ
ಸ್ಮಶಾನ ಮೌನದಲ್ಲಿ ಹುಡುಕುತ್ತಿರುವೆವು
ತೊನ್ನ ತುಣುಕುಗಳನ್ನ.

ನಮ್ಮಾಸೆ ಈಡೇರುವುದಿಲ್ಲ
ಈ ಸೈಯೆನೈಡ್ ವಿಷದ ಮಣ್ಣಲ್ಲಿ.

ಎಲುಬುಗಳನ್ನೆ ಏಣಿ ಮಾಡಿ
ಪೃಥ್ವಿಯ ಆಳರಾದ

ಚಿನ್ನದ ಗಣಿಯಲ್ಲಿ;
ಕಗ್ಗತಲ ಸಾಗರದಲ್ಲಿ
ಚಲಿಸುವ ಪರ್ವತಮಯ ಬೆನ್ನು ಹೊತ್ತು
ನಾವ್ ಬಂದಾಗ
ಮೈ ಪರಚಿ ಹುಡುಕುವರು,
ಗಟ್ಟಿಗಳ ಗುಟ್ಟಾಗಿಸುವರ ನೋಡಿ
ಸೆಲ್ಯೂಟ್ ಹೊಡೆದು ದೂರ ಸರಿಯುವರು.

ಕಪ್ಪು ಜನರ ಆಸೆಗಳು
ಬಸಿದ ರಕ್ತವು
ಪದರು ಗರ್ಭಕ್ಕಿಟ್ಟ ಮಿಂಚಿನ
ಬರೆಗಳೊಂದಿಗೆ ಬತ್ತಿ ಹೋಗಿದೆ,
ವೆಂಟಿಲೇಟರ್‌ಗಳಿಂದ ಚೆಲ್ಲುವ ಹೊಗೆಯೇ
ನಾವ್ ಬಿಟ್ಟ ಬಿಸಿಯುಸಿರು.
ನಾವು ಸುರಿಸಿದ ಬೆವರ ಹನಿಗಳನೆತ್ತಲು
ಹೆಣಗುತ್ತಿವೆ ಶಕ್ತಿಯುತ ಪಂಪುಗಳು.

ಆದರೂ ಸದ್ದು ಗದ್ದಲವಿಲ್ಲದೆ
ಎಳಸು ಕಪ್ಪು ಪೀಳಿಗೆ ಖಾತೆಗಳೊಂದಿಗೆ
ಪಳಯುಳಿಕೆಗಳಾಗಲು
ಪಂಕ್ತಿಯಲ್ಲಡಗಿದೆ.

ಬಿಸಿ ಉಸಿರೊಡನೆ ನುಜ್ಜುಗುಜ್ಜಿಸಿದ
ಸೈಯೆನೈಡ್ ಗುಡ್ಡಗಳು
ಹಿಮಾಲಯ, ಆಲ್ಪ್ಸ್, ರಾಕಿಗಳನ್ನ
ಮೀರಿಸತೊಡಗಿವೆ.

ಮೈಯ್ಯನೆದ್ದ ಸೈಯೆನೈಡ್‌ನಡಿಯಲ್ಲಿ
ನಮ್ಮ ಜೋಪಡಿಗಳು
ಸಹರಾ ರಾಮೇಶ್ವರಗಳಾಗತೊಡಗಿವೆ.

ಎತ್ತಲಿಂದಲೊ ಇತ್ತ ಬಂದವರು;
ಎಲ್ಲಿಯೋ ಇರುವವರು

ಕಪ್ಪು ಸುರಂಗಗಳ ಕತೆಗಳನ್ನೇ
ಅರಿಯದವರು,
ಮಿಂಚುತ್ತಿರುವರು ವೈಭವದ ಹೊಸ್ತಿಲಲ್ಲಿ.

''ಇಗೋ ಆಚರಿಸುತ್ತಿರುವೆವು....
ಶತ ವರ್ಷಗಳ ಗತ ವೈಭವ''

---

* ಕೋಲಾರ ಚಿನ್ನದ ಗಣಿಗಳು ಶತಮಾನೋತ್ಸವ ಆಚರಿಸಿದ ಸಂದರ್ಭದಲ್ಲಿ ಬರೆದ ಕವನ.

# ನೀಗ್ರೋ ಗೆಳೆಯನಿಗೆ

ಓ.... ದೂರದ ನೀಗ್ರೋ ಗೆಳೆಯಾ
ಏಷಿಯಾಫ್ರಿಕ ಖಂಡಗಳು
ಉತ್ತರ ದಕ್ಷಿಣ ಧ್ರುವಗಳಿಗೆ
ನಡೆಯತೊಡಗಿದ್ದು,
ನಾನು ನೀನು ದೂರವಾಗಿದ್ದು,
ಈ ಧ್ರುವಗಳ ರಾಜಕೀಯ
ಸೆಳೆತಗಳಿಂದಲೆ.

ನಿನ್ನ ಕರಿಯ ನೀಗ್ರೋ ಎಂದು
ನನ್ನ ಪಂಚಮ ಅಸ್ಪೃಶ್ಯ
ಎನ್ನುವರಷ್ಟೇ.

ಗೊತ್ತಿಲ್ಲವೆ.... ?
ನಿನ್ನ ಬಲಿತ ರಟ್ಟೆ,
ನನ್ನ ಸಹನೆಯ ಕಟ್ಟೆ
ಏಳು ಖಂಡಗಳಾಗಿದ್ದು.
ನಾನು ನೀನು ಎಚ್ಚರವಾಗುವುದು
ಸಹಿಸದ ಬಿಳಿ – ಸವರ್ಣೀಯರು
ಬರುತಿಹರು ಗ್ರಹಣವಾಗಿ
ನಾವು ನಡೆವ ಬೆಳಕಿನೆಡೆಗೆ.

ಗೆಳೆಯಾ, ಏನೆಂದು ಹೇಳಲಿ ?
ದುಡಿವ ಸಂತಾನವೆಲ್ಲ
ಕರಿಯ ಜನರ ನೆರಳೆಂದೇ.... ?
ನೀಗ್ರೋ – ಅಸ್ಪೃಶ್ಯರಿಂದಲೇ
ಈ ಗ್ರಹ ಚೇತನ ಹೊಂದಿರುವುದೆಂದೇ.... ?

ಅದಿರಲಿ ! ಈಗ ಈ
ಗ್ರಹದ ಪಂಚಭೂತಗಳ
ಹಿಡಿತದಲ್ಲಿಡೋಣ;
ಎತ್ತರ ಬೆಟ್ಟ ಪಾತಾಳ ಕೊಳ್ಳ
ಎಲ್ಲವನ್ನೂ ಸಮನಾಗಿ ಗುಡಿಸೋಣ.

ಓ ದೂರದ ನೀಗ್ರೋ ಗೆಳೆಯಾ
ಕಾಲ ಹದವಾಗುತ್ತಿದೆ
ಬೇಗ ಬಾ ಬೇಗ ಬಾ
ನಿನಗಾಗಿ ಕಾಯುತ್ತಿರುವೆ....

# ಬೆಟ್ಟಗುಡ್ಡಗಳ ಬೋಗುಣಿಯಲ್ಲಿ

ಬೆಟ್ಟಗುಡ್ಡಗಳ ಬೋಗುಣಿಯಲ್ಲಿ
ಮರಗಿಡಗಳ ನೆರಳಿನಲ್ಲಿ
ಮಾತನಾಡಿರಬೇಕು
ನಮ್ಮ ಪೂರ್ವಿಕರು;
ನಾಳೆಗೆ ಬೇಕಾಗುವಷ್ಟು
ರಾಗಿ ಬತ್ತ ಬಯಲುಗಳ ತುಂಬ
ಮಿಂಚು ಹುಳುಗಳ ಬೆಳಕಿನಲ್ಲಿ,
ಪ್ರಾಣಿ ಪಕ್ಷಿಗಳ ತೆಕ್ಕೆಯಲ್ಲಿ,
ಹೂವು ಗಂಧದ ಉಯ್ಯಾಲೆಯಲ್ಲಿ;
ಗುಡುಗು ಸಿಡಿಲು ಕಣ್ಣುಗಳಲ್ಲಿ.

ಒಬ್ಬರು ಮತ್ತೊಬ್ಬರ
ಮಾತುಗಳಿಗೆ ಮರುಳಾಗಿ ತಲೆದೂಗಿ
ಮುಳುಗಿ ತೇಲಿ ಅಪ್ಪಿಕೊಂಡಿರಬೇಕು
ಭೂಮಿ-ಆಕಾಶ
ಒಂದನ್ನೊಂದು ತೋಳು ತೆಕ್ಕೆ ರೆಕ್ಕೆಗಳಲ್ಲಿ.

ತೊದಲುವ ನಾಗರಿಕ ತೊಟ್ಟಿಲುಗಳ
ಕಚ್ಚಿಕಚ್ಚಿ ತುಂಡರಿಸಿದಾಗ ಮಕ್ಕಳು
ಹೆದರಿ ಮುದುರಿ ಓಡಿರಬೇಕು,
ಮಾತುಗಳು ಸೋರೆ ಕುಂಬಳ ಬಳ್ಳಿಗಳ ಜೊತೆ
ವಿಕಾಸದ ಕಡೆಗೆ.

ಹುಡುಕುತ್ತಿರಬೇಕು
ನೆಲದ ಹಾಳೆ ತಾಳೆ ಪತ್ರಗಳು
ಲೇಖನಿ ಹಿಡಿದು ಚರಿತ್ರೆಯನ್ನು;
ನೀರು ಗಾಳಿ ಜೀವ ಸೆಲೆ ಕಿರಣಗಳಲ್ಲಿ,
ಹರಪ್ಪ ಮಹೆಂಜೂದಾರೊ ಗಿಡಬಳ್ಳಿಗಳಲ್ಲಿ,
ಬೆಟ್ಟ ಗುಡ್ಡಗಳ ಬೋಗುಣಿಯಲ್ಲಿ.

# ಇರುವೆಯ ಜೊತೆ

ಒಂದು ದಿನ ಅಪರಾಹ್ನ
ಲೇಖನಿ ಹೊರತೆಗೆದು
ಕುಳಿತುಕೊಂಡೆ ಒಂಟಿಯಾಗಿ
ಬರೆಯಲು ಕವಿತೆ.
ನೋಡಿದೆ ಸುತ್ತಲು, ಯೋಚಿಸಿದೆ
ಸ್ಫೂರ್ತಿ ಹುಟ್ಟಲಿಲ್ಲ.

ಜೀವರಾಶಿಯಲ್ಲೇ ಸಣ್ಣದಾದ,
ಕೋಪ ಬಂದವರೆಲ್ಲ
'ಇರುವೆಯನ್ನ ಹೊಸಕಿದಂತೆ
ಹೊಸಕಿಬಿಡುತ್ತೇನೆ' ಎನ್ನುವ
ಇರುವೆ ಚಂಚಲವಾಗಿ
ಓಡಾಡುತ್ತಿತ್ತು ನೆಲದ ಮೇಲೆ–

ಹೆದ್ದಾರಿಯ ವಾಹನಗಳಂತೆ
ಬರುತ್ತಿವೆ, ಹೋಗುತ್ತಿವೆ ವೇಗವಾಗಿ;
ಮಧ್ಯ ಮಧ್ಯ ನಿಂತು ವಿದ್ಯುತ್ ಸಿಗ್ನಲ್‌ಕೊಟ್ಟು
ನಡೆಯುತ್ತವೆ ಗಣಕ ಯಂತ್ರದ ಅಪ್ಪಣೆಯಂತೆ.

ತಪಕ್ಕನೆ ನೆಲಕ್ಕೆ ಬಿದ್ದ ಹುಳು ಒಂದು
ಬಡಿದುಕೊಂಡಿತು ಬಾಯಿ ಸಹಾಯಕ್ಕೆ;
ಮೀಸೆಯಿಂದ ಮುಟ್ಟಿ ನೋಡಿದ ಇರುವೆ ಒಂದು
ಓಡಿಹೋಯಿತು
ಹುಚ್ಚು ನಾಯಿ ಕಚ್ಚಿದ ಹಾಗೆ.

ಕ್ಷಣಗಳಲ್ಲಿ
ಮುತ್ತಿಕೊಂಡರು ಸಿಪಾಯಿಗಳು ಸುತ್ತಲೂ,
ಮೇಲೆ ಹತ್ತಿ ತುಳಿಯುವವರು;
ಕತ್ತಿಗಳಿಂದ ತಿವಿಯುವವರು;
ಹಲ್ಲಿನಿಂದ ಕಚ್ಚಿ ಕಚ್ಚಿ ಚಪ್ಪರಿಸುವವರು;

ಕೊನೆಗೂ
ಹೊರಟೇಬಿಟ್ಟರು ಹೊತ್ತುಕೊಂಡು.

ಈಗ ನಿಜವಾಗಿಯೂ ಕೋಪ ಬಂದು
ಹೊಸಕಿಬಿಡಬೇಕು ಲೇಖನಿಯಲ್ಲೆ
ಅಂದುಕೊಂಡಿದ್ದೆ ತಡ, ಚುರ್ ಎಂದು
ಕಚ್ಚಿ ಬಿಡಬೇಕೆ ಕಚ್ಚಬಾರದ ಕಡೆ,
ಛೀ 'ಇರುವೆ.... !

# ಕವನದೊಳಗೆ ಕಪ್ಪುಡುಗಿ

ಇವಳ ಮೂಗು ಗಿಳಿಯಂತಿದೆ;
ಕೆನ್ನೆ ಗುಲಾಬಿಯಂತಿದೆ;
ನಡು ಬಳ್ಳಿಯಂತಿದೆ;
ನಡೆ ನವಿಲಂತಿದೆ;
ಇದೆಲ್ಲ ಕಾಣಬರುವುದು
ಪುಂಗ ಕವಿಗಳ ಕವನದೊಳಗೆಂದು
ನಿಮಗರಿಯದೆ ?

ಇವಳ ಬಣ್ಣ ಕಪ್ಪು;
ಇವಳ ಗುಣ ಕಂಪು.

ಈ ನನ್ನ ಕಪ್ಪುಡುಗಿ
ಸಾಧಾರಣ ಹೆಣ್ಣುಗಳಲ್ಲಿ ಸಾಧಾರಣ.
ಇವಳುಣ್ಣೋ ಕಲಬೆರಕೆ ವಸ್ತುಗಳಾಗಲಿ,
ಮಲಗುವ ಹರಕು ಮುರುಕು ಬೊಂತೆಗಳಾಗಲಿ,
ತೊಡುವ ಚಿಂದಿ ತೇಪೆಗಳಾಗಲಿ,
ಕಾಣಬರುವುದಿಲ್ಲ
ನಮ್ಮ ವಿಶ್ವವಿಖ್ಯಾತ ಕವಿಪುಂಗರ
ಕವನಗಳಲ್ಲಿ.

ಇವಳು ಯಾವ ರಾಜನನ್ನು ಮೋಹಿಸಿ
ನಗರಗಳನ್ನ ನೆಲ ಸಮ ಮಾಡಿ
ಚರಿತ್ರೆಯಲ್ಲಿ ಚಿರಕಾಲ ಉಳಿದವಳೂ ಅಲ್ಲ;
ಕವಿ ಮುಂದೆ ಮೈಮಾಟ ತೋರಿಸಿ
ಕವನದೊಳಗೆ ಹೊಗಳಿಸಿಕೊಂಡವಳೂ ಅಲ್ಲ.

ಗುಣವಿಲ್ಲದ ಹಣವಂತ ನಾಯಿಗಳ ಮುಂದೆ
ನಿಂತು ಡೊಗ್ಗು ಸಲಾಮಾಕಿದವಳೂ ಅಲ್ಲ
ಆದರೂ ಕವನದೊಳಗಿವಳೆಸರಿಲ್ಲ.

●

# ಅಗಸ್ತ್ಯನ ಮಡದಿ

ಬ್ರಹ್ಮಗಿರಿ ಸಹ್ಯಾದ್ರಿ ಮುಗಿಲು,
ಸಸ್ಯಶ್ಯಾಮಲೆ ಬಿಚ್ಚಿಹಳು ಸೆರಗು;
ಮಂಜಿನ ಶಾಲು ಹೊದ್ದು ಬೆದರಿದ್ದಾನೆ ಸೂರ್ಯ,
ಮೋಡ ಕೊಡಗಿನ ಮಾಡಿನಿಂದಿಳಿದು
ತಪ್ಪಿಸಿ ಕೊಂಡೋಡಿದ್ದಾನೆ ಚಂದ್ರ!
ಹುಡುಕುತ್ತಿದ್ದಾರೆ ಮೀನುಗಾರರು ಬಲೆ ಬೀಸಿ
ರೇವು, ಪಟ್ಟಣಗಳಲ್ಲಿ,
ಮೀನಾಕ್ಷಿಯರ ಕಣ್ಣುಗಳಲ್ಲಿ.

ಸಾಗಿದಲ್ಲೆಲ್ಲಾ ನಿತ್ಯಹರಿದ್ವರ್ಣ, ನೂರು ವರ್ಣ;
ತಾಯಿ ಜೋಗುಳ ತೂಗು ತೊಟ್ಟಿಲು.
ಖುಷಿಯಿಂದ ಉಬ್ಬಿನಿಂತ ತುಂಬು ಬಸಿರು ಬೆಟ್ಟಗಳು;
ಸುತ್ತಲು ಜೀವಸೆಲೆ ನಗೆ ಬುಗ್ಗೆ;
ಮಡಿಲು ತುಂಬ
ಸಾಧು ಸಂತರು, ಮಹಾತ್ಮರು.

ಅಗಸ್ತ್ಯನ ಮಡದಿಯ
ಅಣೆಕಟ್ಟಿಗೆ ಎಳೆದುಕಟ್ಟಿ
ನಿಲ್ಲಿಸಿದ್ದಾರೆ ನ್ಯಾಯಾಲಯದಲ್ಲಿ. ನಿಟ್ಟುಸಿರು,
ಬೆಂಕಿ, ಬೆವರು, ಚಾಕು, ಚೂರಿ, ಚೈನು,
ಸ್ತಬ್ಧ ಎಲ್ಲೆಲ್ಲೂ ನಿಶ್ಯಬ್ಧ,
ಕಾರ್ಖಾನೆ, ಕಛೇರಿಗಳಲ್ಲಿ ಪಿಸುಮಾತು; ಮೌನ;
ಮೂಲೆಗಳಲ್ಲಿ ಕಣ್ಣೀರಾಕುವ ಕೊಳಾಯಿಗಳು
ಹೊತ್ತೊತ್ತಿಗೂ ಐದೋ, ಹತ್ತೋ ಟಿಎಂಸಿಗಳ ಕುತ್ತಿಗೆ
ಹಿಸುಕಿ ಮೇಕೆದಾಟುವಷ್ಟು ಕಿರಿದಾಗಿ ಓಡಿ
ಶಿಲೆಯಲ್ಲೇ ಕಲೆಯ ಬರೆದು,
ತಲಕಾಡಿನ ಬಸದಿಗಳಲ್ಲೇ
ಕನಸುಗಳ ಮರಳು ರಾಶಿ ಹಾಸಿ
ನಗುತ್ತಾಳೆ ಪ್ರಾಚ್ಯ ಶೋಧಕರ ಎದುರಿಗೆ

ಕಾವೇರಿ;
ನಮ್ಮ ನಿಮ್ಮ ಪ್ರಾಣ ಪಕ್ಷಿ ಗಿಡಮರಗಳ
ಶ್ವಾಸಕೋಶ
ಬ್ರಹ್ಮಗಿರಿ ಸಹ್ಯಾದ್ರಿ
ಬ್ರಹ್ಮಕುಂಡಿಕೆಯ ಉದ್ಭವ;
ಬದುಕು ಬೆಳಗಿಸಿದ ತೀರ್ಥೋದ್ಭವ.

●

# ಮಿನುಗುವ ನಕ್ಷತ್ರಗಳು

ಚೆಲ್ಲಿ ಹೋಗಿವೆ
ಬಾಳೆ ಮರದ ತುಂಡುಗಳು;
ಎಷ್ಟೊಂದು ಹೊಳಪು!
ಹೊಳೆಯುತ್ತವೆ ರಾತ್ರಿಯಲ್ಲಿ,
ಮೃದುವಾಗಿ ಸ್ಪರ್ಶಿಸಿದರೆ
ಹೃದಯದ ಕಣ್ಣುಗಳಲ್ಲಿ,
ಉಸಿರಾಡುತ್ತವೆ ಸಮುದ್ರಗಳು.

ನದಿಗಳೊದ್ದ ನೀರವ ಕಣಿವೆಗಳು;
ಆ ಕಡೆ ಈ ಕಡೆ ಹಬ್ಬಿಕೊಂಡ
ನುಣುಪು ಪರ್ವತಗಳು;
ಕೈಯಲ್ಲೊಂದು ದುಂಡನೆ ಭೂಮಿ.
ಕಣ್ಣಗೊಂದು ಸೂರ್ಯ.
ಹರಿಯುವ ನದಿಕಿರಣಗಳು
ಮುಕ್ತಾಯವಿಲ್ಲದ ಆಳ.

ಹೆಣ್ಣುಗಳು ಬರುತ್ತಾರೆ
ಒಬ್ಬೊಬ್ಬರಾಗಿ ಹೂವುಗಳಂತೆ;
ಎಷ್ಟೊಂದು ಸುಂದರ!
ಬೆಳಗಿನ ಗುಲಾಬಿ ತೋಟ,
ರಾತ್ರಿಯ ಅದ್ಭುತ
ನಕ್ಷತ್ರಗಳ ಆಟ.

ಎದ್ದು ನಿಂತ ರಾತ್ರಿ ರಾಣಿಯರ ಸುತ್ತ
ಹೆಪ್ಪುಗಟ್ಟಿದ ಕಂಪು ಮೈಗಂಪು;
ಜಾರುತ್ತವೆ ಮುತ್ತುಗಳು,
ಬೆಳೆಯುತ್ತವೆ ದಿಬ್ಬಗಳು,
ಸ್ಪರ್ಶಿಸುತ್ತದೆ ಭೂಮಿ,
ಸಮುದ್ರದ ತುಟಿಗಳ,

ನೇತಾಡುತ್ತಿವೆ ಬಾವಲಿಗಳು
ಗಾಳಿಯ ಗುಹೆಯಲ್ಲಿ;
ಹೊರಹೊಮ್ಮುತ್ತವೆ
ಕೋಟಿ ಕೋಟಿ ಜೀವಕಣಗಳು;
ಮಿಂಚುತ್ತವೆ ವಿಮಾನಗಳು
ನೀಲಾಕಾಶದ ನಕ್ಷೆಯಲ್ಲಿ;
ಅಚ್ಚಾಗುತ್ತವೆ ಅಕ್ಷರಗಳು
ಕ್ಷಣಕ್ಕೆ ಲಕ್ಷಾಂತರ.

ಈಜುತ್ತವೆ ಜಿರಳೆಗಳು
ಬಣ್ಣದ ಹಾಸಿಗೆಯಲ್ಲಿ;
ಹೊಸದನ್ನೆ ಮೆಲುಕುವ ರಾತ್ರಿಗಳು
ಗಾಯಗೊಳ್ಳುತ್ತವೆ ಕತ್ತಲಲ್ಲಿ
ಇಣುಕಿದ ಪಂಚಭೂತಗಳು
ಹೌಹಾರುತ್ತವೆ ಗಾಳಿಯ ಗುಳ್ಳೆಗಳು !

ಆಕಾಶದ ಅಲೆಗಳಲ್ಲಿ
ಏರುಪೇರಾದ ಚಂದ್ರರು,
ಚಂಪಕಾ ತುಟಿಗಳಲ್ಲಿ
ಒದ್ದೆಯಾದ ಸೂರ್ಯರು,
ಕತ್ತಲ ತೊಡೆಗಳಲ್ಲಿ
ಕಳೆದೋದ ಗ್ರಹಗಳು,
ಮತ್ತೆ ಮತ್ತೆ
ಮಿನುಗುವ ನಕ್ಷತ್ರಗಳು.

# ಭಸ್‌ನಾಲಾ

1

ಇದೊಂದು ಗದ್ದಲಮಯ
ಕರಿ ಇದ್ದಿಲು ನಗರ.
ಒಳಗೆ, ಪಾತಾಳದೊಳಗೆ
ಕಿರಣಗಳ ಒಂದು ತೊಟ್ಟು
ನೀಲಿ ದೃಷ್ಟಿಗೆ ಕೆಂಬೊಟ್ಟು
ಕಪ್ಪು ವಜ್ರ, ಪಳಯುಳಿಕೆಗಳು;
ಸುಟ್ಟ ಸಾವಿರ ಸೂರ್ಯರು,
ಶಕ್ತಿಯ ಮೂಲ ಕ್ರಿಯೆ
ನಾಗರಿಕತೆಯ ಬುನಾದಿ;
ಭಸ್‌ನಾಲಾ ಬಯಲುಗಳು
ಮೂಲ ಶಕ್ತಿ ಖಾಲಿಯಾದಷ್ಟು
ಎಲುಬುಗೂಡುಗಳು
ಒಳಗೊಳಗೆ ಕರಗಿದಷ್ಟು
ಸಿಲಿಕೋಸಿಸ್
ನಿಮ್ಯಾಟೋಕೋಸಿಸ್
ಕ್ಯಾನ್ಸರ್ ರೋಗಗಳು

2

ಸೈಕಲ್ ರಿಕ್ಷಾ
ತುಳಿಯುತ್ತಿದೆ ಒಂದು
ಗಲಗಲ ಅಸ್ತಿಪಂಜರ;
ಇದರ ನರಗಳು ಕಂಬಿಗಳಾಗಿ
ಎಳೆದ ಎದ್ದುಸಿರು
ಬಿರುಗಾಳಿಯಾಗಿ
ಬತ್ತಿದ ಕಣ್ಣುಗಳು
ಪಾತಾಳ ಸಾಗಿ
ತಲೆಯಲ್ಲಾ ಮೆಲ್ಲಾಗಿ
ಕುಂಡಿಗಳು ಸವೆದ್ಹೋಗಿ

ಬಿಟ್ಟ ಬೇರುಗಳು
ಬುಡು ಮೇಲಾಗಿರಲು
ಸ್ವಾತಂತ್ರ್ಯ ಬಂದ
ಬೆಟ್ಟದೊಟ್ಟೆ
ಪಿಪಾಯಿ ಕುಂಡಿಗಳು
ಕುಣಿಯುತ್ತಿವೆ
ಪ್ರತಿಭಟನೆಯ ಇದರ
ಹರಕು ಪರದೆಯ ಮೇಲೆ.

3

ಉರಿಯುತ್ತಿರುವ
ಇದ್ದಿಲು ವಲಯ,
ಹರಿಯುತ್ತಿರುವ ಪೇತಲ ರಿಕ್ಷಾ,
ಒಳಗೊಳಗೆ ಕರಗುತ್ತಿರುವ
ಎಲುಬು ಗೂಡುಗಳು,
ವಂಚಿಸಿ ಕಾಯುತ್ತಿರುವ
ನೂರಾರು ಭಸ್‌ನಾಲಾಗಳು
ಮನಸ್ಸಿನಲ್ಲಿ ಮೊಟ್ಟೆಗಳಾಕುತ್ತಿರಲು
ಕರಿನಗರ ಕುಡಿದು ಮತ್ತೇರಿ
ವಾಂತಿ ಮಾಡಿದ ವಾಯುಮಂಡಲ
ಸೀಳಿಕೊಂಡು ಹೊರಬರುತ್ತಿತ್ತು,
ನಾವಿದ್ದ ಇದ್ದಿಲು ರೈಲು,
ಛೆಸ್‌ನಾಲಾದಿಂದ ದೂರವಾಗುತ್ತಿತ್ತು.

---

*ದನ್‌ಬಾದ್ ಕಲ್ಲಿದ್ದಲು ಗಣಿಗಳನ್ನ ವೀಕ್ಷಿಸಿದಾಗ ಅನಿಸಿದ್ದು.

# ನಾಗಾ ಬಜಾರಿನಲ್ಲಿ

ಭಾರತ ದೇಶದಲ್ಲಿ,
ಉತ್ತರ ಈಶಾನ್ಯ ಮೂಲೆಯಲ್ಲಿ,
ಹಿಮಾಲಯ ತಪ್ಪಲುಗಳಲ್ಲಿ,
NA(N)GA ಬಸ್ತಿಗಳು
ಆಕಾಶದ ನತ್ತುಗಳು.
ಅಂಗಾಮಿ.. ಆಓ.. ಲೋಥಾ..
ಛಾಂಗ್.... ಫೋಮ್.... ಬುಡಕಟ್ಟುಗಳು;
ನಡೆದಾಡುವ ಮಂಗೋಲಾಯ್ಡ್
ಕೈಕೋವಿ ನಾಗಾದಾವುಗಳು;
ಗೆಳೆಯರಿಲ್ಲದೆ ದುಃಖಿಸುವ ಕಾಡುಗಳು;
ಶೀತಲ ಕೊಯ್ಹಿಮಾ ಹಜಾರೆಯಲ್ಲಿ
ಭಾನುವಾರ
ಕೆಂಪು ವಸ್ತ್ರಗಳ ನಾಗಾಬಜಾರು
ಬಣ್ಣಬಣ್ಣದ ಗೆಡ್ಡೆಗೆಣಸುಗಳ ಸುತ್ತ
ಕೆಂಪು ಕಟ್ಟಿದ ಟೊಮ್ಯಾಟೊ ಗತ್ತು,
ಗಮಿಗಮಿಸುವ ಕೊತ್ತಂಬರಿ ಸುತ್ತ
ಹಸಿರು ಎಲೆಗಳ ಇಲ್ಲೈ ಪತ್ತ,
ಚಿಂದಿ ಗೋಣಿ ಚೀಲಗಳಲ್ಲಿ
ದೇಹ ಆತ್ಮಗಳ ತುರುಕಿ
ಕುಕ್ಕುರು ಕುಳಿತ ನಾಯಿಗಳು.
ತರಕಾರಿ ಕುಪ್ಪೆಗಳಲ್ಲಿ
ಒಂದನ್ನೊಂದು ಎಳೆದಾಡುತ್ತಿರುವ
ಕಪ್ಪೆಗಳು.
ಬಾಲಗಳ ಬಿಸಾಕಿ ಬೆಟ್ಟಗಳ ನೋಡುತ್ತ
ಶತಪತ ಶಪಿಸುವ
ಕೋತಿಗಳು.
ನೇಣುಗಂಬಗಳಲ್ಲಿ ನೇತಾಡುತ್ತಿರುವ
ಹಾವುಗಳು.

ಮುತ್ತುರತ್ನಗಳಂತೆ ಅಳೆಯುವ
ಕಪ್ಪೆ ಚಿಪ್ಪು ಬಸವನ ಹುಳುಗಳು.
ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ
ಕುಂಟೆ ಮಿಡಿತೆಗಳ ಗರಿಮುರಿ ಸದ್ದು,
ಹಸಿರು ಹಳದಿ ಬಣ್ಣಗಳೆ ಉಬ್ಬಿಕೊಂಡಿರುವ
ರೇಷ್ಮೆ ಹುಳುಗಳು.
ಹೀಗೆ
ಎಲ್ಲವನ್ನೂ ಆಸೆ ಕಣ್ಣುಗಳಿಂದ
ನೋಡಿ ನೋಡಿ, ಗೋಜಾಡಿ
ಹಣ ಕೊಟ್ಟು ಕೊಂಡುಕೊಳ್ಳುವ ಜನ
ಹೊರಡುತ್ತಾರೆ ತಮ್ಮ ತಮ್ಮ
ಗೊರ್‌ಗಳ ಕಡೆಗೆ
ಚಪ್ಪರಿಸುತ್ತಾ ನಾಲಿಗೆಗಳನ್ನ
ನೆನೆಯುತ್ತಾ ನಾಗಾ ಭಕ್ಷ್ಯಗಳನ್ನ.

| | | |
|---|---|---|
| ಬಸ್ತಿ | : | ಹಳ್ಳಿ |
| ಗೊರ್ | : | ಮನೆ |
| ನಾಗಾದಾವು | : | ನಾಗಾಮಚ್ಚು |

---

*ಕೊಯ್ಹಿಮಾ ನಗರದ ನಾಗಾ ಬಜಾರು ವೀಕ್ಷಿಸಿದಾಗ ಅನಿಸಿದ್ದು.

# ವಿಕಾಸ

ಬುಲ್‌ಡಾಗ್, ಡಾಬರ್, ಕಂತ್ರಿ, ಕಜ್ಜಿ, ಹುಚ್ಚಿ ಇವೆಲ್ಲ
ವಿಕಾಸದ ಹಾದಿಯಲ್ಲಿ ಇನ್ನೂ ನಾಲ್ಕು ಕಾಲಿನಲ್ಲೆ
ಉಳಿದುಕೊಂಡಿರುವ ನಿಷ್ಠೆ ನಾಯಿಗಳು,
ದೂರ ಸಾಗಿವೆ ನಮಗಿನ್ನ ಎಷ್ಟೋ ಪಟ್ಟು.
ಸಸ್ಯಾಹಾರಿ, ಮಾಂಸಹಾರಿ, ಬಾಟ್ಲಿಬಾಯಿ, ಪೋಲೀಸರ ಸಹಾಯಿ
ಕಾವಿ ಪ್ರಿಯೆ, ಲಲನಾಮಣಿಯರ ಅಪ್ಪಿ ಮುದ್ದಿನ ಪಪ್ಪಿ,
ಕುನ್ನಿ ಮರಿ ಬೋನ್ ಬಿಸ್ಕಟ್‌ಗಳ ಟಾಮಿ;
ಕಳ್ಳರ ವೈರಿ, ದೆವ್ವಗಳ ದರ್ಶಿನಿ, ನಾರಾಯಣಿ,
ಪಾಪಿ ಸಂತಾನ ಪಾಲನೆಗೆ ಹತ್ತಾರು ಮೊಲೆಗಳು,
ಮೊಲೆಗೊಂದು ಕುನ್ನಿ,
ಎಲುಬು ಕಡಿಯಲು ಕೋರೆ ಹಲ್ಲುಗಳು,
ಮೆದುಳು ಮೂಗಿಗೆ ತಂದು ವಾಸನೆ ಮೂಸಿ
ಮೈಕುಲುಕಿ, ಕಾಲೆತ್ತಿ, ಗೋಡೆಯಲ್ಲಿ ನಕ್ಷೆ ಬಿಡಿಸಿ
ಕುಂಯ್‌ಗುಡುತ್ತ ಸ್ವಾಮಿ ನಿಷ್ಠೆಯನ್ನ
ಡೊಂಕು ಬಾಲದಲ್ಲಿ ಸುತ್ತಿ, ವಿಧಾನಸೌದ ಹತ್ತಿ,
ಕಿವಿಗಳನ್ನ ಆಂಟೆನಾಗಳನ್ನಾಗಿಸಿ ಕತ್ತಲನ್ನ ಭೇದಿಸಿ
ಗುರ್ ಎಂದರೆ ಸಾಕು,
ಇಲ್ಲ ! 'ನಾಯಿಗಳಿವೆ ಎಚ್ಚರಿಕೆ' ಎಂದು ಬರೆದು ಹಾಕಿದರೂ ಸಾಕು !
ಗ್ರಹಚಾರ ಕಾದಿದೆ ಬೀದಿಯಲ್ಲಿ ಓಡಾಡುವವರಿಗೆ :
ಋತುಗಳಲ್ಲಿ ಬೆದೆಗೆ ಬಂದರೂ ಬೀದಿಗಳೆ ಎದ್ದು ನಿಲ್ಲುತ್ತವೆ,
ಪೌರ ಕಾರ್ಮಿಕರು ಕುತ್ತಿಗೆಗೆ ಕುಣಿಕೆ ಹಾಕಿ ತಿವಿದಾಗ
ನೋಡಬೇಕು ಇವುಗಳ ಗೋಳಾಟ,
ಲಜ್ಜೆ ಇಲ್ಲದ ಬಾಳು....
ಪತ್ರಿಕೆಯವರೊ ಸುಟ್ಟುಕೊಳ್ಳುತ್ತಾರೆ ಬಿಸಿಬಿಸಿ ಬಜ್ಜಿ,
ಆಂಬೊಡೆ, ಯಾರದೂ ಬಾಗಿಲುಗಳ ಮುಂದೆ :
ಬೆಳಗ್ಗೆ ಪತ್ರಿಕೆ ನೋಡಿದ ಜನ
ವಿಚಿತ್ರವಾಗಿ ನೋಡುತ್ತಾರೆ
ಇವು ನಾಯಿಗಳೆ.... ? ಅಬ್ಬ ಎಷ್ಟೊಂದು
ವಿಕಾಸ.

# ಪುಟ್ಟ ಹುಡುಗಿ

ಹೂಬಳ್ಳಿ ಚಿಟ್ಟೆ ಪುಟ್ಟ ಹುಡುಗಿ;
ಕುಹೂ ಕುಹೂ ಎಳೆ ಕೋಗಿಲೆ ಮಾವು ಚಿಗುರು;
ಕಪ್ಪು ಕಣ್ಣು ಗುಲಾಬಿ ತುಟಿ ಎಳೆ ನಡು
ವಸಂತಗಳು ಆರೊ.... ಏಳೊ.... !

ಪುಟ್ಟ ಹುಡುಗಿಯ
ಎಳೆದು ತಂದರು ಆಟದ ಬಯಲಿಂದ;
ಮದುವೆಯೆಂದರು ಮುತ್ತೈದೆ ಎಂದರು;
ಕುಲು ಕುಲು ನಕ್ಕರು.

ಪುಟ್ಟ ಹುಡುಗಿಯ
ಕೈತುಂಬಿದರು ಅಕ್ಕಿ ಕಾಳು;
ಹಣೆ ತುಂಬ ಅರಿಶಿನ ಕುಂಕುಮದೊಳು
ಕಂಕಣ ಕಟ್ಟಿದರು ದಿಕ್ಕು ದಿಕ್ಕಿಗೆ
ಹಾದಿಯನ್ನೆ ಕಿತ್ತುಕೊಂಡರು.

ಪುಟ್ಟ ಹುಡುಗಿಯ
ಎಳೆದುತಂದರು ಆಟದ ಬಯಲಿಂದ;
ವಿಧವೆಯೆಂದರು, ಶನಿ ಎಂದರು,
ಶಾಪ ಹಾಕಿದರು.

ಪುಟ್ಟ ಹುಡುಗಿ
ಕೇಳಿದಳು ಅಳುತ್ತಾ ತಬ್ಬಿ:
ಹೌದೆ! ಅಜ್ಜ ನಾನು ವಿಧವೆಯೇ ?
ಅಜ್ಜ ಹೇಳುವುದಾದರು ಏನು -

ಉರುಳಿದವು ಕಲ್ಲುಗಳು ಬೆಟ್ಟದಿಂದ,
ಹಾದಿ ಬೀದಿಗೆ ಅಡ್ಡವಾಗಿ,
ಗೊಡ್ಡು ಸಮಾಜದ ಅಸಡ್ಡೆಗೀಡಾಗಿ.

ಹೂಬಳ್ಳಿ ಚಿಟ್ಟೆ ಪುಟ್ಟ ಹುಡುಗಿ
ಕುಹೂ ಕುಹೂ ಎಳೆ ಕೋಗಿಲೆ ಮಾವು ಚಿಗುರು;
ಕಪ್ಪು ಕಣ್ಣು ಗುಲಾಬಿ ತುಟಿ ಎಳೆ ನಡು
ವಸಂತಗಳು ಆರೋ.... ಏಳೊ.... !

# ಪುಪ್ಪುಸ ತಾಂಬಾಣ

ಬೆಳಗ್ಗೆ
ಚಿಂದಿ ಎದ್ದ ಭೂಪಟ ಒಂದು
ಉದ್ದವಾಗಿ ಮುದ್ದಿಸುತ್ತ ನೆಲವನ್ನ
ಬಂದು ಕುಳಿತಿತು ಮರದ ಕೆಳಗೆ.
ಮರದ ನೆರಳೇ ಭಾರವಾಗಿ
ಏರಿ ಕುಳಿತಿತು ಅದರ ಮೇಲೆ.

ಜೋಳಿಗೆಯಿಂದ ಹೊರಬಿದ್ದ
ಪುಪ್ಪುಸ ತಾಂಬಾಣವೊಂದು
ಕುಳಿತು ಉಸಿರಾಡಿತು ಎದುರಿಗೆ;
ಗಾಳಿಯೆ ಅರಿಯದ ಗುಹೆಯಂತೆ.
ಬಿದ್ದಿತ್ತು ಊರುಗೋಲು ಉತ್ತರಕ್ಕೆ;
ತಲೆ ಕೆದರಿತ್ತು ಜಾಲಿಗಿಡದಂತೆ.

ಖನಿಜಗಳೆಲ್ಲ ಖಾಲಿಯಾಗಿ,
ಸರೋವರಗಳೆಲ್ಲ ಬತ್ತಿ ಹೋಗಿ,
ಬೆಟ್ಟಗಳೇ ಸಿಕ್ಕಿಕೊಂಡಿವೆ ಗಂಟಲಲ್ಲಿ.

ಜನ ಹೋಗುತ್ತಿದ್ದಾರೆ ಬರುತ್ತಿದ್ದಾರೆ.

ವೃದ್ಧ ದಿನದ ಬೆಳಕನೆಲ್ಲ ಗುಡಿಸಿಕೊಂಡು
ಪುಪ್ಪುಸ ತಾಂಬಾಣ ತುಂಬಿಕೊಂಡು
ಉತ್ತರ ದಿಕ್ಕನ್ನೆ ಕೈಯಲ್ಲಿಡಿದುಕೊಂಡು
ನಡೆದ ಕ್ಷಿತಿಜದ ಕಡೆಗೆ
ಮಧ್ಯೆ
ಸರಕಾರಿ ಅಂಗಡಿ ಮುಂದೆ ನಿಂತು,
ಕೈ ನೀಡಿ ಪಡೆದ ಪಾಶಾಣ. ಮುಂದುವರಿದ.

ಈಗ ದೂಷಿಸುತ್ತ ರಾತ್ರಿಯನ್ನ,
ಚೆಲ್ಲಾಡಿದ ಮಿಂಚುಗಳ ಮೂಟೆಯನ್ನ,
ಓಡಿಬಂದ ಹಸುಳೆಗಳು ಸಿಕ್ಕಿಸಿಕೊಂಡವು

ಕಣ್ಣಿಗೊಂದು ದೀವಟಿಗೆ.

ಕತ್ತಲನ್ನ ಗುಡ್ಡೆಯಾಕಿದ ಆಕಾಶ
ಬಿಮ್ಮನೆ ಅಳುತ್ತಿತ್ತು ಮೂಲೆಯಲ್ಲಿ.

# ನಮ್ಮ ಬಾಗಿಲು

ದಿನಾ
ಮುಂಜಾನೆ
ಏಳುವ ನಮ್ಮ ಬಾಗಿಲು
ರಂಗೋಲಿಗಳ ಹೆಣೆಯುತ್ತಾ,
ನವಿಲುಗಳ ಜೊತೆ ಕುಣಿಯುತ್ತ,
ಪ್ರೀತಿಯಿಂದ ಎಲ್ಲರನ್ನೂ ಮಾತನಾಡಿಸುತ್ತ,
ಓಡಾಡುವಳು ನಮ್ಮ ಬಾಗಿಲು.

ಸ್ವಾತಿ ಮಳೆಯ ಸಂಭ್ರಮದಲ್ಲಿ
ಒಳಕ್ಕೂ ಹೊರಕ್ಕೂ ಓಡಾಡುತ್ತ,
ಪುಟ್ಟ ಲಂಗ ತೊಟ್ಟ ಪೋರಿ –
ಚಿತ್ತಾರ ಬಿಡಿಸಿದ ಕೈಗಳ ತುಂಬ
ಎಲ್ಲರಿಗೂ ವಂದಿಸುತ್ತ,
ಓಡಾಡುವಳು ನಮ್ಮ ಬಾಗಿಲು.

ವೈಶಾಖದ ಉರಿ ಬಿಸಿಲಿನಲ್ಲಿ,
ಹೊಂಗೆ ಮರದ ನೆರಳಿನಲ್ಲಿ,
ಪುಟಾಣಿಗಳ ಜೊತೆ ಕುಂಟೆಬಿಲ್ಲೆ
ಆಡುವಳು ನಮ್ಮ ಬಾಗಿಲು.

ದಿನ ಮುಗಿದು
ನಾವೆಲ್ಲ ಮಲಗಿದಾಗ
ಬೆಚ್ಚನೆ ಬಟ್ಟೆ ಹೊದಿಸಿ,
ಎಲ್ಲವನ್ನೂ ಸರಿಸಿ,
ನಮ್ಮ ಕನಸಿನ ತೋಟಗಳ ಸುತ್ತ
ಕಾಯುವಳು ನಮ್ಮ ಬಾಗಿಲು.

ನಾನು ನನ್ನವಳು
ಜಗಳ ಆಡಿದಾಗ ಬಾಗಿಲು ಮುಚ್ಚಿ,
ಸಂತೋಷ ಉಕ್ಕಿದಾಗ ಎದೆ ಬಿಚ್ಚಿ,
ನನ್ನ ಮಗ ಬರುವುದು ತಡವಾದರೆ
ನನ್ನ ಪತ್ನಿಯ ಜೊತೆ ಬೀದಿಗೆ ಬಂದು
ಎದುರುನೋಡುತ್ತ ನಿಲ್ಲುವಳು ನಮ್ಮ ಬಾಗಿಲು.

ಆತ್ಮೀಯರು ಹತ್ತಿರ ಬಂದರೆ
ಕರೆದು ಕೈಹಿಡಿದು ಕೂರಿಸಿ, ಉಪಚರಿಸಿ,
ಕಷ್ಟ ಸುಖ ಹಂಚಿಕೊಳ್ಳುತ್ತ
ಕುಳಿತುಬಿಡುವಳು ನಮ್ಮ ಬಾಗಿಲು.

# ಜಾವರ್ ಗಣಿಗಳು

ಸಿಂಧುವಿನ ಪೂರ್ವಕ್ಕೆ,
ರಾಜಸ್ಥಾನದ ದಕ್ಷಿಣಕ್ಕೆ,
ಅರಾವಳಿ ಎದ್ದು ನಿಂತಿದೆ;
ಬೇರುಗಳ ಇಳಿಬಿಟ್ಟು ಪಾತಾಳಕ್ಕೆ!
ವಿಜ್ಞಾನಿ-ಭೂವಿಜ್ಞಾನಿಗಳು
ಗತ ಲೆಡ್-ಜಿಂಕ್ ಗಣಿಗಳ ನೋಡಿ
ಹಿಡಿದುಬಿಟ್ಟೆವು – ಕಂಡ್ಹಿಡಿದು ಬಿಟ್ಟೆವೆಂದು
ಆಕಾಶಕ್ಕೆ ಹಾರಿ – ಭೂಮಿಗೆ ಜಾರಿ
ಸರ್ವೇ ಮಾಡಿ ಪ್ಲಾನ್ಹಾಕಿ
ಎದ್ದ ಎದೆಗಳಿಗೆ
ಬೆಂಕಿ ಬರೆಗಳಾಕಿ ಬ್ಲಾಸ್ಟಿಟ್ಟು
ಮಾಡಿದರು ರಂಗ-ಸುರಂಗ
ಹುಡುಕಿದರು ಕತ್ತಲಲ್ಲಿ ಖನಿಜವ.

ಕತ್ತಲು ಆಕಾಶದಷ್ಟಾಯಿತು,
ಅರಾವಳಿ ಪಾತಾಳದಷ್ಟಾಯಿತು,
ವಿಜ್ಞಾನಿ ಬೆರಳ ತುದಿಗೆ
ಬಂದವು ಕಣ್ಣುಗಳು –
ತುಂಬಿದ್ದ ಬೆಳದಿಂಗಳು,
ಕರಗಿದ್ದ ಎಲುಬುಗಳು,
ಕತ್ತಲ ಪಿಳಿಪಿಳಿ ಕಣ್ಣುಗಳು,
ಪಿಸುಗುಟ್ಟಿದವು
ನಾವೂ ಸೂರ್ಯನ ನೋಡಬೇಕೆಂದು....

ಯಾರೀ ಭೂವಿಜ್ಞಾನಿಗಳು ?
ಯಾರೀ ನಾಗರಿಕ ಭೂತಗಳು ?
ಮೂವತ್ತು ಶತಕಗಳ ಹಿಂದೆ
ಸಿಂಧು ಬಯಲಿನ ಕೆಳಗೆ
ಚರಿತ್ರೆಯ ಕತ್ತಲಲ್ಲಿ

ಭೂಗರ್ಭವೆಲ್ಲ ಖಾಲಿ ಮಾಡಿ
ಕುಳಿತವರು.

ಓಡಾಡಿರಬೇಕು
ನಾವೆಗಳ ತುಂಬ ತುಂಬಿದ ಬೆಳದಿಂಗಳು,
ನಿಹಾರಿಕೆಗಳ ಮಧ್ಯೆ ಜ್ಯೋತಿರ್ವದ ಲೋಕಗಳು,
ಇದ್ದಿರಬಹುದೇನೊ
ಇವರ ಕಣ್ಣುಗಳಿಗೆ ಕಿರಣಗಳ ವೇಗದ ನೋಟ,
ಎಲುಬುಗಳಿಗೆ ಸಮುದ್ರಗಳೊತ್ತು ನಿಲ್ಲುವ ಲವಣ.

---

ಸಂದರ್ಭ : ಜಾವರ್ ಲೆಡ್-ಜಿಂಕ್ ಗಣಿಗಳನ್ನು ವೀಕ್ಷಿಸಿದ್ದು.

# ಕನಸುಗಳು

ಈ ಕವನ ಓದುವ ಕನಸುಗಾರರೆ –
ಕನಸುಗಳ ಬೆಚ್ಚನೆ ನೆನಪುಗಳು
ನಿಮಗೆ !
ಕನಸುಗಳು ಬರುತ್ತವೆಯೆ ?

ನನಗೆ ನನ್ನ ಸುಶೀಲ
ಪಕ್ಕದಲ್ಲಿ ಮಲಗಿದ್ದರೂ
ಪಕ್ಕದ ಮನೆ ಯುವತಿಯರು,
ಕಾಲೇಜ್ ದಿನಗಳ ಹುಡುಗಿಯರು,
ರೈಲಿನಲ್ಲಿ, ರೋಡಿನಲ್ಲಿ,
ಆಫೀಸಿನಲ್ಲಿ, ಇನ್ನೂ ಸಿನಿಮಾದಲ್ಲಿ
ನೋಡಿದ ಬೆಡಗಿಯರು
ವಿರಾಮ ಬಿಡದೆ, ದಿನ ರಾತ್ರಿಯಾಗಿದ್ದೆ
ತಡ ! ಬಂದು ಮುತ್ತುತ್ತಾರೆ;
ಹತ್ತಿಯಂತ
ಮೈಗಳನ್ನು ಒತ್ತುತ್ತಾರೆ.

ನಾನು ಅಷ್ಟೆ ನನ್ನೆಂಡತಿಯನ್ನು
ಅರ್ಧ ರಾತ್ರಿಯಲ್ಲಿ
ನಿದ್ದೆಯ ಕನಸಿನಲ್ಲಿ
ಒತ್ತುತ್ತೇನೆ....
''ಅಯ್ಯೋ ಮಲಗ್ರಿ ಸುಮ್ಮನೆ
ಹೊತ್ತುಗೊತ್ತು ಬೇಡವೆ....''
ಜಾಡಿಸಿ ದೂರ ಸರಿಯುತ್ತಾಳೆ;
ನನ್ನ ಮಗ ಕ್ರಾಂತಿ ಕಾಲೆತ್ತಿ
ದೊಪ್ಪನೆ ಹಾಕುತ್ತಾನೆ
ಹೊಟ್ಟೆಯ ಮೇಲೆ;
ಕನಸುಗಳೆಲ್ಲ ಬೆದರಿ ಚೆದರಿ
ದೂರ ದೂರ ಸರಿದು ನಿಲ್ಲುತ್ತವೆ !
ಇವಳೂ ನನ್ನಂತೆ
ಬೆಚ್ಚನೆಯ ಕನಸುಗಳ

ಕಾಣುತ್ತಿರಬಹುದೆ.... ?
ಮತ್ತೆ ಒಂದೊಂದೆ
ನನ್ನ ಹಳೆಯ
ಮುದ್ದು ಮುಖಗಳನ್ನ
ನೆನೆದುಕೊಳ್ಳುತ್ತೇನೆ.
ನಿಧಾನವಾಗಿ ಹತ್ತಿರಬಂದು
''ಒಬ್ಬನೆ ಇದ್ದೀಯ ತಾನೇ ?''
ಕೇಳುತ್ತಾರೆ.
ಹೌದು ! ಇಲ್ಲಿ ನೋಡಿ
ಯಾರು ಇಲ್ಲ,
ಒಂದೇ ಒಂದು ಮರದ ತುಂಡು.
ಹೂವಿನಂತೆ ಅಪ್ಪಿಕೊಳ್ಳುತ್ತಾರೆ,
ಲೊಚಲೊಚನೆ ಮುತ್ತಗಳ
ಮುದ್ರಿಸುತ್ತಾರೆ,
ಮಾತನಾಡಲೂ ಸಮಯವಿಲ್ಲದೆ
ನಾ ಕಡ್ಲಿಂಗ್ ಮಾಡುತ್ತಿರಲು....

ಕಂಬಳಿ ಕಿತ್ತೆಸೆದು ಕನಸುಗಳ
ಬೆತ್ತಲೆ ಮಾಡಿದ ಸುಶೀಲ
''ರೀ ಎಳ್ರೀ ಮೇಲೆ
ಯಾರ ಜೊತೆ ಮಾತನಾಡುತ್ತಿದ್ದೀರಿ...
ಸುಮತೀನೋ ಸಾವಿತ್ರೀನೋ....''
ಗದರುತ್ತಾಳೆ.

ಬೆಳಕೆಂದರೆ ಮೊದಲೆ ಭಯಪಡುವ
ಈ ನನ್ನ ಗೆಳತಿಯರು,
ತಬ್ಬಿಕೊಂಡರೂ ಸಿಗದೆ
''ಕತ್ತಲಾಗಲಿ ಮತ್ತೆ ಬರುತ್ತೇವೆ....''
ಮಾಯವಾಗುತ್ತಾರೆ.

ಈಗ ಹೇಳಿ
ನಿಮಗೆ ಬರುವ ಕನಸುಗಳ
ಬೆಚ್ಚನೆ ನೆನಪುಗಳ ?

# ಅಘೋರ

ಶಿವನೊಬ್ಬ ಅಘೋರ –
ಅವನ ಗುಡಿ ಅಸಹ್ಯ ಘೋರ.
ಗಂಗೆಯ ಧ್ರುವಗಳು ಭಗಭಗ ಅಘೋರ,
ಹುಟ್ಟು ಸಾವುಗಳ ನೇಪಥ್ಯ
ಮರಣ ಕರಣಿಕೆ ಹರಿಶ್ಚಂದ್ರ ಕತ್ತಲ ಗೋರಿಗಳು

ಅಮಾರಿ, ಸಜಾರಿ, ಬಜಾರಿಗಳ ತಪಸ್ಸಿನ
ಮುದ್ರಿಕೆಗಳು.
ತೊಟ್ಟು ತೀರ್ಥದಲ್ಲಿ
ಮೂವತ್ತುಮೂರು ಕೋಟಿ ಬೂದಿ ಭಸ್ಮಾಸುರರು,
ಸುತ್ತಲು ಕುಣಿಯುವ ಬೆಂಕಿ ನಾಲಿಗೆಗಳು;
ಭೀತಿಯಿಂದ ಪಾರಾಗಲು ಮಂತ್ರ ಪಠಿಸುವ
ಶವಗಳು.
ಆಗಮಿಸುತ್ತಾರೆ ಹತ್ತಿರಕ್ಕೆ
ಅಘೋರಿಗಳು
ಕೈಕಾಲುಗಳ ತುಂಬ ತಲೆ ಬುರುಡೆಗಳು,
ಕಣ್ಣುಗಳ ತುಂಬ ನರಿನಾಯಿಗಳು,
ಗಟ್ಟಿಯಾದ ಶಿವಲಿಂಗಗಳು,
ತೆರೆದುಕೊಳ್ಳುತ್ತದೆ ವಿಶಾಲವಾಗಿ
ಹೇಡಿ ಭೂಮಿಯ ಭಗ.
ಸಮುದ್ರಗಳೆ ಮುಳುಗಿ ಹೋದರು
ಸ್ಖಲನದಲ್ಲಿ;
ದಾಹ ತೀರದ ಅಘೋರಗಳ ಹಸಿವು –
ವಿಶ್ವ ಜೀವ ಜಂತುಗಳನ್ನೆಲ್ಲ
ಸಂಭೋಗಿಸಿ,
ಮಲಮೂತ್ರ ಶವಗಳನ್ನೆಲ್ಲ
ಭಕ್ಷಿಸಿ,
ವಿಶ್ವವನ್ನೆ ಜಯಿಸಿದಂತೆ !

ಹುಟ್ಟು ಸಾವುಗಳ ಮೆಟ್ಟಿದಂತೆ,
ಗಿರ್‌ನಾರ್ ಹಿಮಾಲಯ ಸೇರಿಬಿಡುವ
ಕಾಲದ ಕೈಕಾಲುಗಳಿವರು;
ಆತ್ಮ ಪರಮಾತ್ಮ ಕಣಕಣ
ಅಘೋರೇಶ್ವರರಿವರು,
ಕಲಿ ಕಾಲದ
ಶಿವನ ಮರಿಗೋರಿ
ಆಘೋರಗಳಿವರು.

---

ಅಘೋರ : ಒಂದು ಪಂತ.

ಒಬ್ಬ ಅಘೋರನ ವ್ಯಾಖ್ಯಾನ : ಸಂಭೋಗಿಸುವಾಗ ವೀರ್ಯಾಣುಗಳನ್ನ ತಡೆಹಿಡಿಯುವ ನಿಗೂಢವನ್ನ ಸಾಧಿಸಿದವನೇ ನಮ್ಮ ಗುರು.

# ಕಪ್ಪೆಗಳು

ಕಪ್ಪೆಗಳು, ಮೈಯಲ್ಲಾ
ಭಯಂಕರ ಚುಕ್ಕೆಗಳು.

ಆಶ್ವಾಸನೆಗೆ ಅಗಲ ಬಾಯಿ,
ಬಯ್ಗಳು ಕೇಳದ ಸಣ್ಣ ಕಿವಿ,
ಹುಟ್ಟಿದಾಗಲೆ ಉದ್ದ ಬಾಲ,
ಇದೇ ಮುಂದಿನ ಚೇಲಾ.

ನೀರಿನಲ್ಲಿ ನೀರುಗಪ್ಪೆ;
ಬಯಲಲ್ಲಿ ಗೊಂಡ್ರಗಪ್ಪೆ;
ಐದು ವರ್ಷಕ್ಕೊಮ್ಮೆ ಚಿಪ್ಪೆ.

ದುಂಡಗೆ ಗುಂಡಗೆ;
ಎಲುಬು ಕಾಣದೆ ಮೆತ್ತಗೆ;
ಸಪೂರ ಮೈ ನುಣ್ಣಗೆ.

ನ್ಯಾಯ ನೀತಿ ನುಂಗಿದವು –
ಜನತಂತ್ರ ತಿರುಗುಮಂತ್ರ –
ವಟರ್.... ವಟರ್.... ನಮ್ಮಗತಿ.

ಈ ದೇಶವೊಂದು ತರ,
ಇವು ಬೇಡಿ ಬಂದ ವರ.
ತಲೆಗೊಂದು ತಕ್ಕಡಿ,
ತೂಗುವುದರಲ್ಲಿ ಎತ್ತಂಗಡಿ.

ಧೂಮ ಧೂಪ ಜುಟ್ಟುಗಳು
ಹಣಕ್ಕೆ ಹರಿಯುವ ಕಪ್ಪು ಗಟಾರಗಳು,
ಲಾಗಾ ಹೊಡೆಯಲು ಕಪ್ಪೆಗಳು
ಖಾಕಿ ಬಣ್ಣದ ಕವಚಗಳು

ಯಾವುದೇ ನೀರು ಗಾಳಿ ನೆಲ
ಆದರೂ ಸೈ; ಒಂದೇ ಒಮ್ಮತ
ಕಪ್ಪೆಗಳೆಲ್ಲ ಒಂದೇ ಭಯಂಕರ.

●

# ಬಂಡೆಗಳು

ಭೂ ಒಡಲಿಂದ ಚಿಮ್ಮಿದ
ಬಿಸಿಯುಸಿರು ಬಣ್ಣ ಬಣ್ಣದ ಹೂವುಗಳಾಗಿ
ಅರಳಿಕೊಳ್ಳುತ್ತವೆ,
ಮಕ್ಕಳು ಹೊರಳಾಡುವಂತೆ.

ಪರ್ವತಗಳ ಮೇಲೆ, ಒಳಗೆ
ಚಿತ್ರ ವಿಚಿತ್ರ ಯೋಚಿಸುತ್ತವೆ,
ಬಿಸಾಡಿ ಭಾರವ.

ಕಣ್ಣುಗಳಿಲ್ಲದವರಿಗೆ ವಿಕಾರವಾಗಿ
ನಂಬಿದವರಿಗೆ ಮಧ್ಯಾಹ್ನದ ಬುತ್ತಿಗಳಾಗಿ
ತುಂಬಿಕೊಂಡಿವೆ ಬಯಲೆಲ್ಲ.

ಪೂರ್ವಜರಿಗೆ ಗವಿಗಳಾಗಿ,
ಬಿಡಿಸಿದರೆ ಶಿಲಾಬಾಲಕಿಯರಾಗಿ,
ನಡೆದಾಡಿವೆ ಸುತ್ತಮುತ್ತ.

ತಲೆಯ ಮೇಲೆ ಮರಗಿಡಗಳು
ಒಡಲಲ್ಲಿ ನದಿಗಳ ತುಂಬಿಕೊಂಡಿವೆ
ಕೊಡಲು ಕೇಳಿದವರಿಗೆ.

ಕಟ್ಟಿಸಿದವರ ಅರಮನೆಗಳಾಗಿ,
ನದಿಗಳಿಗೆ ಅಣೆಕಟ್ಟೆಗಳಾಗಿ,
ನಿಂತಿವೆ ಬೆಳಕಿನಂತೆ.

ಆಳ ಪಾತಾಳ ಕಪ್ಪು ಸುರಂಗಗಳಲ್ಲಿ
ಕೆಂಪು ಹಸಿರು ವಜ್ರಗಳಾಗಿ
ಹೊಳೆಯುತ್ತವೆ
ಬೆಂಕಿ ಬರೆ ಹಾಕಿದಷ್ಟೂ!
ನೋಡಿದಷ್ಟೂ – ಆಕಾರಗಳಾಗಿ,
ಹುಡುಕಿದಷ್ಟೂ – ಚಿತ್ರವಿಚಿತ್ರ ಕಲೆಗಳಾಗಿ,

ಚರಿತ್ರೆಯಲ್ಲಿ – ಆನೆ ಕುದುರೆಗಳಾಗಿ
ಮಸಣದಲ್ಲಿ – ಗೋರಿಕಲ್ಲುಗಳಾಗಿ
ನಿಂತಿವೆ ಕಡೆದು ನಿಲ್ಲಿಸಿದಲ್ಲಿ
ಬಂಡೆಗಳು.

# ಲಖನೌ ಬೀದಿ

1

ಪ್ರತಿಯೊಂದು ಪೇಟೆಗೂ ಉಂಟು
ಒಂದು ಗಾಂಧಿ ಬಜಾರೊ ಇಲ್ಲ ನೆಹರೂ ವೃತ್ತವೊ
ಕನಿಷ್ಠ ಪ್ರತಿಮೆಯೊ;
ಆದರೆ ಇಲ್ಲಿ ನವಾಬರ ನಗರದಲ್ಲಿ
ರಸ್ತೆ, ಪಾರ್ಕ್, ವೃತ್ತ, ಗಂಜ್, ಗಲ್ಲಿಗಳು
ಚೆಲ್ಲಿ ಹೋಗಿವೆ ನವಾಬರ ಎದೆಗಳ ಮೇಲೆ.

2

ಹಜ್‌ರತ್‌ಗಂಜೊಂದು ಬೀದಿ,
ಬಿಸಿಲು ಬೀದಿಯ ಉದ್ದಗಲ ತುಂಬಿದೆ.
ಕವಲೊಡೆದ ಪಸೀನ ಹೊರಳಾಡಿದೆ ಮೈಮುಖಗಳೆಲ್ಲ.
ಸೂರ್ಯನ ಕರೆಗೆ ಓಡಿಬಂದಂತೆ
ಬರ್ಫ್ ನೀರಿನ ತಾಣಗಳು ಕರೆಯುತ್ತಿವೆ ಉದ್ದಕ್ಕೂ
''ಆಯಿಯೆ ಸಾಬ್....
ಏಕ್‌ದಂ ತಂಡಾ ಪಾನಿ ಪಚ್ಚಾಸ್ ಪೈಸೆ ಗ್ಲಾಸ್.''
ಒಳಗೆ ಹೋಟಲಿನೊಳಗೆ ಕುಲ್ಫಿ ತಿನ್ನುತ್ತಿರುವ ಬೆಡಗಿಯರ
ಹಲ್ಲುಗಳು ಜಿಲುಗುಟ್ಟಿ ಮುಖ ಸಣ್ಣಗೆ ಮಾಡಿ
ನೋಡುತ್ತಾರೆ ಬೀದಿಯ ಕಡೆ ಬಿಸಿಲನ್ನ ಚಪ್ಪರಿಸುವಂತೆ.
ಮೇಲೆ ದಿವಾರ್‌ಗಳಿಗೆ ಗರ್ಧನ್ ತಗಲಿಸಿಕೊಂಡ
ಮೂರು ರೆಕ್ಕೆಯ ಹಕ್ಕಿಗಳು
ರೆಕ್ಕೆ ಬಿಚ್ಚಿ ಓಡಿಸುತ್ತಿವೆ ಹವೆಯನ್ನು ಒಂದೇ ಸಮನೆ;
ಬೀದಿ ಕೆರೆದುಕೊಳ್ಳುತ್ತದೆ
ಮ್ಯಾಕ್ಸಿ ನೈಲಾಕ್ಕಿಗಳ ಒಳಗೆ
ಒದ್ದೆಯಾಗಿರುವ ರೇಖಾಕೃತಿಗಳ
ಗಮನಿಸಿದ ಜುಬ್ಬಾಪೈಜಾಮುಗಳು
''ದೂಫ್‌ಕೆಲಿಯೆ ಏ ಹೀ ಅಭ್ಬಾ ಹೈ'' ಎನ್ನುತ್ತವೆ

3

ಫುಟ್‌ಪಾತಿನ ಡಾಬಾಗಳಲ್ಲಿ ಒಂದೇ ವಾಸನೆ

ಕಡು ಸಾಸುವೆ ಒಗ್ಗರಣೆ
ಜಿಲೇಬಿ, ಸಮೋಸ
ದಾಲ್‌ರೋಟಿ ತಿನ್ನುವ ಇವರು
ನಿಂಬು ನೀರಿನಲ್ಲಿಚಿಕಿ ನುಂಗಿಕೊಳ್ಳುತ್ತಾರೆ
ಗುಟಕ್ಕನೆ ಬಿಸಿಲನ್ನ.
ಪಾನ್‌ಪೂರ್ರಿಯ ಸುತ್ತಿ ಮುತ್ತಿವೆ
ಗೋದಿ ಬಣ್ಣದ ಔರತ್‌ಗಳು.
ಎಲ್ಲಿ ಲಿಪ್‌ಸ್ಟಿಕ್ ಹಾಳಾಗುತ್ತದೊ ಎಂದು
ಬಹಳ ಕಾಳಜಿಯಿಂದ ಎರಡೇ ಬೆರಳ ತೂರಿ
ಉಬ್ಬಿಸಿಕೊಳ್ಳುತ್ತಾರೆ ಕೆನ್ನೆಗಳನ್ನ.
ನಡುವೆ ನಿಂತ ಪುಟಾಣಿಗಳು
ಚೀಪುತ್ತಿವೆ ಐಸ್‌ಕ್ರೀಮ್ ಬೆರಳುಗಳನ್ನ.

4

ನೋಡು ನೋಡುತ್ತಿದ್ದಂತೆ ಚಳಿಯ ದಿನಗಳು ಶುರುವಾಗಿ
ಬೀದಿಯಲ್ಲ ಹಾಸಿಕೊಂಡಿವೆ ಉಣ್ಣೆ ಬಟ್ಟೆಗಳು.
ಬಿಸಿ ಛಾಯೆ ಕುಡಿದು ಚಳಿಯ ನುಂಗಿಕೊಂಡವರು
ಜೇಬಿನಲ್ಲಿ ಕೈಯಾಕಿ ಹಿಸುಕುತ್ತಾರೆ ಚಳಿಯನ್ನ,
ಹಾಗೆ ಇಂಗ್ಡಾ ಚೂಲದ ಸುತ್ತ ಜೋಡಿಸಿವೆ ಕೈಗಳು.
ಅರ್ಧ ವರ್ಷ ಒಂದೇ ಕಡೆ ಮಲಗಿ ಧೂಳಾಗಿದ್ದ
ರಜಾಯಿಗಳು ಹೊರಬಂದಿವೆ ಉಸಿರಾಡುತ್ತಾ,
ಮಕ್ಕಳು ಪಿಳಿ ಪಿಳಿ ನೋಡುತ್ತಾರೆ
ಮಂಕಿ ಕ್ಯಾಪುಗಳ ಒಳಗಿಂದ.

5

ನಗರದ ನಡುವೆ
ಗೋಮತಿಯ ದಡಗಳಲ್ಲಿ
ಕಾಣುವ ಶಿಥಿಲ ಗೋಡೆಗಳಲ್ಲಿ, ರಸ್ತೆಗಳಲ್ಲಿ
ಚೆಲ್ಲಿ ಹೋಗಿವೆ ನವಾಬರ ಶಾಹರಿ, ಗಜಲ್‌ಗಳು.
ಓಧ್ರುತ್ತಿವೆ ಲಖ್.. ಲಖ್.. ಪೇತಲ ರಿಕ್ಷಾ, ಟಾಂಗಾಗಳು.
ಬೀದಿ ದಾಟಲು ಬುರ್ಖಾಗಳ ಒಳಗಿರುವ ಮುಖಗಳು
ಪರದೆ ಸರಿಸಿ ಅರೆಘಳಿಗೆ ನೋಡುತ್ತಾರೆ ಸುತ್ತಲೂ

ಅಕ್ಕಪಕ್ಕದ ಗೋಡೆಗಳ ಮೇಲೆ ಬೆರೆತೋಗಿದ್ದಾರೆ
ಸಿನಿಮಾ-ರಾಜಕೀಯ ನಾಯಕರು.

6

ಲಖನೌ ಬೀದಿಗಳು
ಚಳಿಗೆ ರಜಾಯಿ ಹೊದ್ದುಕೊಳ್ಳದೆ,
ಬಿಸಿಲಿಗೆ ಪಂಕಾ ಹಾಕಿಕೊಳ್ಳದೆ,
ಮಲಗಿ ನಿದ್ದೆ ಮಾಡುತ್ತಿದ್ದರೆ
ನದಿ ಗೋಮತಿ ಸಾಗಿದೆ ಗಂಗೆಯ ಕಡೆಗೆ.

# ಕಾಶಿ

ಕಾಶಿ
ಬನಾರಸ್
ವಾರಣಾಸಿ
ಪವಿತ್ರ ಗಂಗಾ ದಡದ ಗೋಪುರಗಳು
ಚೆಲ್ಲಿದ ಪಿಂಡಕ್ಕೆ ಮುತ್ತಿದ ಕಾಗೆಗಳು.
ಯಾಗ, ಯಜ್ಞ, ಮೇಳ,
ಶ್ರಾದ್ಧ, ಸಂಕೇತ, ಘಾಟುಗಳು;
ಹೆಣಗಳ ಸುತ್ತ ಹೇನುಗಳು.
ಗಂಗಾ-ಯಮುನಾ ಸಂಗಮ –
ಆಳ ಜಡ ಮೂಢ ನಂಬಿಕೆಗಳು.
ಬೋಳಿಸಿಕೊಂಡ ಮಂಡೆಗಳು,
ಬುಡಕ್ಕೆ ಮುತ್ತಿದ ಗೆದ್ದಲು,
ತುಂಬಿ ನಡೆಯುವ ಗಂಗಾಜಲದ ಗಿಂಡಿಗಳು :
ಸುಟ್ಟು ಬೂದಿಯ ಚೆಲ್ಲಿ
ಕೈ ತೊಳೆದುಕೊಳ್ಳುವವರು;
ಸುಡಲಾಗದೆ ಹೆಣ ಎಸೆಯುವವರು;
ಪಾಪ ಪುಣ್ಯಗಳ ಉಸುರಿ
ಪಿಂಡದಿಂದ ಮೋಕ್ಷ ಪಡೆಯುವವರು;
ಉಸಿರಾಡಲಾಗದೆ ಬುಸುಗುಡುವ
ಸೂಳೆಯರ ಬ್ರಾಥೆಲ್‌ಗಳು.
ಗೋಡೆಗಳ ಮೇಲೆ
ಮೊಘಲರ ಕಾಲದ ಕೃತ್ಯಗಳು,
ಮಂತ್ರಗಳ ಪಠಿಸುವ ಪಂಡಾಗಳು,
ಮುಟ್ಟಿ ಮುಟ್ಟಿ ಸವೆದ್ಹೋದ
ಕಾಶಿ ವಿಶ್ವನಾಥನ
ಸಹಸ್ರಾರು ಲಿಂಗಗಳು !

# ಯುದ್ಧಗಳು

ಯಾರಿಗಾಗಿ
ಯುದ್ಧಗಳು ?
ಚರಿತ್ರೆಯುದ್ದಕೂ
ಕಾದಾಡಿದ ರಕ್ತ ಮುದ್ದೆಗಳು !
ಯುದ್ಧಗಳು
ಎಲ್ಲಿ
ಏಕೆ
ನಡೆದವು
ಮನುಷ್ಯ-ಮನುಷ್ಯರ
ಮಧ್ಯೆ ?

ಯುದ್ಧಗಳು
ಒಂದ್ಹೆಣ್ಣಗಾಗಿ,
ರಣ ಹದ್ದಿಗಾಗಿ,
ಹುಚ್ಚು ರಾಜರಿಗಾಗಿ,
ಇನ್ನೂ ಅರ್ಥವಿಲ್ಲದ
ದೇಶಪ್ರೇಮದ
ಗುರ್ತಿಗಾಗಿ,
ಯಾರಿಗಾಗಿ
ಯುದ್ಧಗಳು ?
ಚರಿತ್ರೆಯುದ್ದಕ್ಕೂ
ಕಾದಾಡಿದ ರಕ್ತಮುದ್ದೆಗಳು

ರಕ್ತ ತೊಯ್ದ ನೆಲವೆ
ಭೂಮಂಡಲವೆಲ್ಲಾ
ಪ್ರತಿ ಗಡಿಯೂ
ಗತಿಸಿದ
ವಿಕೃತ ಸಿಪಾಯಿ ಮುಖವೆ,
ಪ್ರತಿ ಕೋಟೆ ಕೊತ್ತಲೆ

ದಾಹ ತೀರದ
ರಕ್ತ ಭೂತಗಳೆ,
ಯಾರಿಗಾಗಿ
ಯುದ್ಧಗಳು ?
ಚರಿತ್ರೆಯುದ್ದಕೂ
ಕಾದಾಡಿದ ರಕ್ತ ಮುದ್ದೆಗಳು !

# ಕಣ್ಣು ಕಿಟಕಿಗಳಿಂದ

ಹುಡುಗನಾಗಿದ್ದಾಗ ನಾನು
ಚುಕ್ಕೆ ಚಂದ್ರಮಗಳ ದಾಟಿ ಪಯಣಿಸಿದ್ದೆ
ರಾತ್ರಿ ಹಗಲುಗಳೆನ್ನದೆ.

ಈಗಲೂ ಸುತ್ತುತ್ತೇನೆ
ಕುಪ್ಪಳಿಸಿ ನುಗ್ಗುವ ರೈಲಿನ ಬೋಗಿಗಳಲ್ಲಿ,
ಗಾಲಿಗಳ ಚುಕು ಪುಕು ಸದ್ದಿನಲ್ಲಿ.

ಯಾತ್ರಿಕರ ಪ್ರಯಾಣಿಕರ ಹೊತ್ತು ಧಾವಿಸುತ್ತದೆ ರೈಲು :
ದೊಡ್ಡ ದೊಡ್ಡ ನಿಲ್ದಾಣಗಳಲ್ಲಿ ನಿಂತು ಪಲೊ ಎಂದು ಚೆಲ್ಲಿ
ಮತ್ತೆ ತುಂಬಿಕೊಳ್ಳುತ್ತದೆ.

ಈ ದೇಶದ ರೈಲೋ
ಅಸ್ಸಾಮಿನ ಮೂಲೆಯಲ್ಲೊ,
ಎತ್ತರದ ಜಮ್ಮುವಿನಲ್ಲೊ,
ಪಶ್ಚಿಮದ ಮರಳು ರಾಜಸ್ಥಾನದಲ್ಲೊ
ಕೂತರು ತಂದು ಬಿಡುತ್ತದೆ
ನೀವು ಸೇರಬೇಕಾದಲ್ಲಿ.

ನದಿ ನಗರಗಳು ಅಡ್ಡವಿಲ್ಲ;
ಗಾಳಿ ಗುಡ್ಡಗಳು ತೊಂದರೆಯಿಲ್ಲ;
ನುಗ್ಗಿ ನಡೆಯುತ್ತವೆ ಉಕ್ಕಿನ ಗಾಲಿಗಳು,
ಬೆಸೆಯುತ್ತವೆ ಮೂಲೆ ಮೂಲೆ ಹೃದಯಗಳು.

ಪುಟಾಣಿ ಮಕ್ಕಳು ನೋಡುತ್ತಾರೆ
ಬೆರಗು ಕಣ್ಣು ಕಿಟಕಿಗಳಿಂದ –
ಓಡುವ ಮರಗಳನ್ನ, ಬೆಟ್ಟಗಳನ್ನ
ಎಲ್ಲಿಗೆ ಹೋಗುತ್ತಿವೆ ಇಷ್ಟು ವೇಗವಾಗಿ ?

ಹೊಸ ಮದುವೆಯಾದ ಜವಾನ
ಬಿಟ್ಟು ಕೂತಿರಲು ಪ್ರಿಯತಮೆಯ, ಬೋಗಿಯಲ್ಲಿ
ನಡೆಯುತ್ತವೆ ಗಾಲಿಗಳು ಕುಪ್ಪಳಿಸಿ ಸದ್ದು ಮಾಡುತ್ತ
ದೂರ ಸರಿಯುತ್ತವೆ ದಢಗುಟ್ಟುವ ಹೃದಯಗಳು,
ತಲ್ಲಣಗೊಳ್ಳುತ್ತದೆ ನೋಡುವವರ ಮನಸ್ಸು.

ಬರ್ತಿಳಿದ ಚಿಗುರು ಮೀಸೆ ಯುವಕ
ನಡೆಯುತ್ತಾನೆ ಬೋಗಿಯಿಂದ ಬೋಗಿಗೆ;
ತುಂಬಿಕೊಳ್ಳುತ್ತಾನೆ
ಸಿಕ್ಕರೆ ಮುದ್ದು ಮುಖಗಳ
ರಾತ್ರಿಯ ಕನಸುಗಳಿಗೆ ಗ್ರಾಸವಾಗಲಿ ಎಂದು.

ಥೈಲಿ ಹೊತ್ತು ರೈಲತ್ತಿದ ಮಾರವಾಡಿ
ಊಟ ಮಾಡದೆ ಸೀಟೂ ಬಿಡದೆ
ಮೆತ್ತಿ ಕುಳಿತಿದ್ದಾನೆ ಮೂಲೆಯಲ್ಲಿ.

ರಾತ್ರಿ ಕಿಟಕಿಯ ಕಡೆ ತಲೆಯಾಕಿ
ನಿದ್ರೆ ಮಾಡಿದ ಯುವತಿ
ಬೆಳಗ್ಗೆ ಗೋಳಾಡುತ್ತಾಳೆ ಕೊರಳು ನೋಡಿ
ಕತ್ತರಿಸಿ ಬಿಟ್ಟರು ಚಿನ್ನದ ಸರ ಯಾರೋ.... ?

ರಾತ್ರಿಗೊರಕೆಯೊಡೆದ ಪ್ರಯಾಣಿಕನೊಬ್ಬ
ಬೆಳಕಿನೆಲ್ಲಿ ಮೂಲೆ ಸೇರಿದ್ದಾನೆ ಬೆತ್ತಲೆಯಾಗಿ
''ಅಯ್ಯೋ ಪಾಪ ! ಎಲ್ಲಾ ಕಳ್ಳತನವಾಯಿತೆ.... ?
ತೆಗೋ ಮುಚ್ಚಿಕೊ ನಿನ್ನ ಮಾನ''
ಪಂಚೆ ಕೊಡುತ್ತಾನೆ ಪ್ರಯಾಣಿಕನೊಬ್ಬ.

ಹುಡುಕುತ್ತಿದ್ದಾರೆ ಪಂಡಾಗಳು
ಗಂಗಾ-ಕಾವೇರಿಯಲ್ಲಿರುವ ಯಾತ್ರಿಕರಲ್ಲಿ
ನಮ್ಮ ಅತಿಥಿಗಳು ಯಾರೆಂದು.

ವೇಗ ಕಮ್ಮಿ ಮಾಡಿದ ರೈಲು
ಕತ್ತಲಲ್ಲಿ ಇಳಿಯುತ್ತದೆ
ನಿಧಾನವಾಗಿ ನದಿಯ ಮೇಲೆ
ಹೊಟ್ಟೆಯಲ್ಲಿರುವವರು ಅಲುಗಾಡದೆ
ನಿದ್ದೆ ಮಾಡಲೆಂದು :
ಹಾಗೇ ಅವರ ಗೊರಕೆ ಕೂಡ
ಭಂಗವಾಗದೆ ಇರಲಿ ಎಂದು.

ಮೂಡುತ್ತವೆ ರಾತ್ರಿ-ಹಗಲುಗಳು ಹೀಗೆ
ಬೆರೆತ ಜೀವಗಳು ಬೆಳಗುತ್ತಿವೆ ದೀಪಗಳಂತೆ,
ಉರುಳುತ್ತವೆ ಗಾಲಿಗಳು ಎಂದಿನಂತೆ.

# ಆ ದಿನ ಅವನ ಹೃದಯ ನಿಂತಾಗ

ಶತಮಾನಗಳ ಅಪಮಾನ
ಅಸ್ಪೃಶ್ಯತೆ ಅನಾಗರಿಕ ಮೂಢನಂಬಿಕೆಗಳು
ಒಟ್ಟುಗೂಡಿ ಹೊರಹೊಮ್ಮಿದವು
ವಸಂತಕಾಲದ ಒಂದು ದಿನ :
ಅಂಬೆವಾಡಿಯ ಕೊಂಬೆಗಳಲ್ಲಿ
ಮೊದಲ ಮಳೆ ಇಳೆಗೆ ಬಿದ್ದಂತೆ,
ನದಿಗಳು ದಾರಿ ಕಂಡುಕೊಂಡಂತೆ,
ಬಂಡೆಗಳು ಚಿಗುರೊಡೆದಂತೆ.

ಆಕಸ್ಮಿಕ ಅಕ್ಷರ ಕಲಿತು,
ಕೋಟಿ ಕಪ್ಪು ಜನರಿಗೆ ಉಸಿರುಕೊಟ್ಟು,
ಗುಡುಗಿದ ಭೀಮ :
ಮನುಷ್ಯರಿಗೆ ಒಳಿತು ಮಾಡದ ಧರ್ಮ,
ಧರ್ಮವಲ್ಲ;
ಜಾತಿ ಮತಗಳು ಗೌರವ ಅಲ್ಲ;
ಜ್ಞಾನ ದೇಗುಲ ಒಬ್ಬರಿಗಲ್ಲ;
ಪಂಚಭೂತಗಳಿಗೆ ಯಾವುದೂ ಇಲ್ಲ;
ಈ ಹುಲು ಮಾನವರಿಗೇಕೆ
ಈ ಉಸಾಬರಿ ಎಲ್ಲಾ ?

ವರ್ಣಗಳಲ್ಲೆ ಬದುಕುವ
ದೇಶಕ್ಕೊಂದು ದಾರಿ ತೋರಿಸಿ
ಹಳ್ಳಕೊಳ್ಳ ಎಲ್ಲವೂ ಮುಚ್ಚಿ
ಫಸಲು ನೋಡದೆ ಪ್ರಾಣ ಬಿಟ್ಟಾಗ
ಆ
ದಿನ
ಅವನ
ಹೃದಯ ನಿಂತಾಗ....

ನಿಂತೆವು ತಬ್ಬಲಿಗಳಾಗಿ ನಾವೂ ಕೂಡ
ಸರಕಾರ ಮಾಡಿಸಿದ
ಪ್ರತಿಮೆಯ ಕೆಳಗೆ –

ಕೈಯಲ್ಲಿ ಸಿಮೆಂಟ್ ಪುಸ್ತಕ,
ಕಣ್ಣಿಗೆ ಕಬ್ಬಿಣ ಚಾಳೀಸು,
ಮೈ ತುಂಬಾ ಕಪ್ಪು ಬಣ್ಣ,
ಯಾರದು ಈ ಹೇಯಕೃತ್ಯ.... ?
ಬೆರಳು ತೋರಿಸುತ್ತಾನೆ ಭೀಮ :
ತಪ್ಪಿವೆ ದಿಕ್ಕುಗಳು ದಲಿತರಲ್ಲೆ
ಈ ಮೂಲದ ಅಡಿಪಾಯದಲ್ಲೆ.

# ಮೊಘಲರಚ್ಚಿದ ಗಿಡಬಳ್ಳಿಗಳು

ಇಲ್ಲಿ ಹಿಮಾಲಯ ತಪ್ಪಲಲ್ಲಿ
ಸುರಿವ ಹಿಮದ ಚಳಿಯಲ್ಲಿ
ದಾಲ್ ಸರೋವರದ ದಡಗಳಲ್ಲಿ
ಮೊಘಲರಚ್ಚಿದ ಗಿಡ ಬಳ್ಳಿಗಳು
ಓಡಾಡುತ್ತವೆ
ಹಿಮಶಿಖರಗಳ ದಾಟಿ;
ಹೂವುಗಳ ಅಪ್ಪಿಕೊಂಡು
ಆಲಿಂಗನ ನೀಡಿದ
ಕೋಮಲಾಂಗಿಯರೆಷ್ಟೊ
ಲಾವಾಗಳ ಚುಚ್ಚಿಕೊಂಡು
ಬೆಳೆದ ಶಿಖರ ಮೊನಚುಗಳೆಷ್ಟೊ....

ಹೂತುಟಿಯ ಮುತ್ತುಗಳು,
ಚಳಿಗೆ ಗುಳಿ ಬಿದ್ದ ಕೆನ್ನೆಗಳು,
ಹೀಗೆ ಎಲ್ಲವನ್ನೂ ನೋಡುವ ಮರಗಳು
ದಿನವೆಲ್ಲ ಉಸಿರು ಬಿಡದೆ ನಿಂತು
ಕಂಡಿದ್ದೆಲ್ಲ ಪುರಸತ್ತಾಗಿ
ಹಂಚಿಕೊಳ್ಳಲು ಕೈ ಚೆಲ್ಲುತ್ತವೆ
ಸಾಯಂಕಾಲದ ಕಡೆಗೆ.

ಓಡಾಡುವ ಶಿಖರಗಳ ಸುತ್ತ
ಉಸಿರಾಡುವ ಗಾಳಿ
ಬಸಿರಾದ ಮಾತುಗಳು ಬೆಳೆಯುತ್ತವೆ
ತಪ್ಪಲುಗಳ ತಬ್ಬಿ
ಒದ್ದೆಯಾದ ಎಲೆಗಳು,
ತೊಟ್ಟಿಕ್ಕುವ ಹನಿಗಳು,
ಬಿರಿದ ಹೂವುಗಳು,
ನಗುತ್ತವೆ ಮುಗಿಲುಗಳ ಜತೆ.

ಬಿಳುಪು ಮೂಡುವ ಚಳಿಯಲ್ಲಿ
ಉಸಿರಾಡುವ ಫೌಂಟನ್‌ಗಳು;
ಹೆಣೆದುಕೊಂಡ ಬಳ್ಳಿಗಳಲ್ಲಿ
ತೂಗಾಡುವ ಸೇಬುಗಳು
ಭಾರವಾಗುತ್ತವೆ ಶಿಖರಗಳಿಗೆ.

ಎದೆ ತಪ್ಪಲಪ್ಪಿ ಎದ್ದುನಿಂತ
ಎತ್ತರದ ಪೈನ್ ಮರಗಳು,
ತಬ್ಬಿಕೊಂಡು ಹಾರಾಡುವ ಮುಗಿಲುಗಳಲ್ಲಿ
ಹಾಲು ಕುಡಿವ ಚಂದ್ರರು.

ಗಾಳಿಯಲ್ಲಿ ತೇಲಾಡುವ ಹೂಮುತ್ತುಗಳು,
ಮುಗಿಲ ನೆರಿಗೆ ಬಿಚ್ಚಿ
ಹಾರುವ ಜೋಡಿ ಹಕ್ಕಿಗಳು,
ನೀಲಾಕಾಶವೆಲ್ಲ ಹೊಳೆಯುವ
ಜೀವದಾ ಚುಕ್ಕೆಗಳು.

ಇಲ್ಲಿ ಹಿಮಾಲಯ ತಪ್ಪಲಲ್ಲಿ
ಸುರಿವ ಹಿಮದ ಚಳಿಯಲ್ಲಿ
ಹೂಮುಗಿಲುಗಳ ತಬ್ಬಿ
ಮೊಟ್ಟೆಗಳಿಡುವ ಬಯಕೆಗಳು.

# ಗಾಳಿಯ ಗುಟುಕು

ಗಾಳಿ ಬೆಳಕಿನೊಳಗೆ ತೂರಿ
ಚಿಟ್ಟನೆ ಚೀರಿತು ನಕ್ಷತ್ರ.
ದಿಗ್ಭ್ರಮೆಗೊಂಡಿತು
ಭೂಮಿ-ಆಕಾಶ.
ಉಚ್ಛ್ವಾಸ ನಿಶ್ವಾಸವೆ
ಈ ಪ್ರಪಂಚದ ಬಲ.
ಮಗು ಬೆಳಕೊಳ್ಳುತ್ತಿದೆ
ನಕ್ಷತ್ರಗಳ ಜೊತೆ
ಹಕ್ಕಿಗಳು ಹಾರುತ್ತಿವೆ
ಅವನ ಬಾರಿ ಬಾರಿ
ಬೋಗುಣಿ ಕಣ್ಣುಗಳ ಮುಂದೆ.
ಜಾರುತ್ತಿವೆ
ಬಿಂದ ತುಟಿಗಳ ಮೇಲೆ
ಜ್ಯೋತಿರ್ವದ ಲೋಕಗಳು;
ಇದರ ಕನಸುಗಳು
ಎಂತಿರಬಹುದು.... ?
ಇದಕ್ಕೂ ಎರಡು ಧ್ರುವಗಳುಂಟೆ ?
ಒಂದೇ ಯೋಚನೆ
ಈ ಲೋಕಕ್ಕೆ.
ನೋಡು ನೋಡುತ್ತಿದ್ದಂತೆ
ಬೆಳಕೆಂಬ ಮಗು
ಚಿಟ್ಟನೆ ಚೀರಿ.
ಒದ್ದೆಯಾಯಿತು
ಭೂಮಿ.

# ಹನಿಗಳ ಕೊಡೆ

ಕೈಯಲ್ಲಿ ಹಸಿರ ಬೆರಳಿಡಿದು
ಪ್ರೀತಿಯಲ್ಲಿ ಆತ್ಮ ಬೆಸೆದು
ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು
ಕಾಲ ನಡೆದುಬಂದಿದೆ ನಾವಿದ್ದಲ್ಲಿಗೆ.

ನಿಸರ್ಗ ಶಾಲೆಯಲ್ಲಿ ಒಂದು ನಕ್ಷತ್ರಪುಂಜ –
ಒಳಗೆ ಬೆಳಕೆಂಬ ಟೊಂಗೆಯ ಕೆಳಗೆ
ಹಸಿರು ರೆಕ್ಕೆಗಳ ಹಕ್ಕಿಯೊಂದು
ಇಂದ್ರ ಧನಸ್ಸಿನಿಂದ ಎಳೆ ಕಿರಣಗಳ ತಂದು,
ಚಂದ್ರನಿಂದ ಸುಪ್ಪತ್ತಿಗೆ ತಂದು,
ಬಯಕೆಗಳ ನೇತಾಕಿದೆ
ಬೆಳೆಯುವ ಬೆಟ್ಟಗಳಿಗೆ.

ತಲೆಯ ಮೇಲೆ ಗ್ರೀನ್‌ವಿಚ್ ಪಟ್ಟಿ,
ಧ್ರುವಗಳ ಅಣಕಿಸುವ ಬಾಲ;
ಎರಡು ಹುಣ್ಣಿಮೆ ಕಣ್ಣುಗಳು
ಪೂರ್ವ ಪಶ್ಚಿಮ ದಿಕ್ಕುಗಳು.

ಬಿಸಿಲಲ್ಲಿ ಹವಾನಿಯಂತ್ರಣ,
ಚಳಿಯಲ್ಲಿ ಬೆಚ್ಚಗೆ ಬೆಸುಗೆ ಅಪ್ಪುಗೆ,
ಗಾಳಿಯಲ್ಲಿ ಹೂವಿನ ಉಯ್ಯಾಲೆ,
ಮಳೆಯಲ್ಲಿ ಹನಿಗಳ ಕೊಡೆ,
ಎಷ್ಟೊಂದು ನಾಗರಿಕ ಸೌಕರ್ಯಗಳು
ಈ ಪುಟ್ಟ ಗೃಹದಲ್ಲಿ !
ಯುಗಗಳ ನಾಗರಿಕ ತೊಟ್ಟಿಲಲ್ಲಿ !

ಬೆಳಗು ದಿನವಾಗಿ
ದಿನವು ರಾತ್ರಿಯಾಗಿ
ರಾತ್ರಿ ಕತ್ತಲಾಗಿ
ಹೆದರಿದ ತಾಯಿ

ಹೆಬ್ಬೆಟ್ಟಿನಲ್ಲಿ ಜೇಡಿಮಣ್ಣು
ಒಬ್ಬೊಟ್ಟುಮಾಡಿ,
ನೀಲಿಬಾನ ಮಿಂಚು ತಂದು
ದಿಕ್ಕುಗಳಿಗೆ ದೀಪ ಹಚ್ಚಿ
ಕೈ ತುತ್ತಮಾಡಿ ನೀಡುವಳು.

ಹಾಡಿದವು ಮಕ್ಕಳು
ನಿಸರ್ಗದ ಹಾಳೆ ತೆಗೆದು
ಹಸಿರನ್ನ ಅಳಿಸಬೇಡಿ....
ಅಲ್ಲಿ ನಮ್ಮ ಪುಟ್ಟ ಪುಟ್ಟ ಮನೆಗಳಿವೆ
ಹೂವು ಹಣ್ಣು ಬಣ್ಣಗಳಿವೆ
ಆನೆ ಕುದುರೆ ಚಿಟ್ಟೆಗಳಿವೆ....

ಅಪ್ಪರಲ್ಲಿ ಅಪ್ಪ ಗದರಿದ :
ಸುಮ್ಮನೆ ಮಲಗಿರೆಂದು
ಹೊತ್ತು ಕೂಡ
ಬೆಟ್ಟ ಏರಿ ಇಳಿಯಿತೆಂದು.

ಜಾರಿಕೊಳ್ಳುತ್ತವೆ ಪುಟ್ಟ ನಕ್ಷತ್ರಗಳು
ಕನಸಿನ ಲೋಕದಲ್ಲಿ
ನಿದ್ದೆಯ ಸಮುದ್ರದಲ್ಲಿ.

---

* ಮಕ್ಕಳನ್ನು ಸಾಧ್ಯವಾದಷ್ಟು ಹೆಚ್ಚು ಕಾಲ ಆಡಿಕೊಳ್ಳಲು ಬಿಟ್ಟು ಬಿಡಿ. ಮುಂದೆ ಅವರ ಬದುಕು ಹೇಗಿರುತ್ತದೊ ಯಾರಿಗೆ ಗೊತ್ತು.

– ಎಚ್. ಡಬ್ಲ್ಯೂ. ಲಾಂಗ್‌ಫೆಲೊ

# ನಾನೊಂದು ಕತ್ತಿ

ಕಬ್ಬಿಣ ಯುಗದಲ್ಲಿ
ಒಂದು ಕತ್ತಿಯಾಗಿ
ರೇಣುಕಾದೇವಿಯ ತಲೆ ಕತ್ತರಿಸಿ,
ಜಟಾಯುವಿನ ಭುಜ ಸವರಿ,
ಏಕಲವ್ಯನ ಬೆರಳು ಚಪ್ಪರಿಸಿ,
ಕಸಾಯಿ ಅಂಗಡಿಯಲ್ಲಿ
ಕಣ್ಣು ಬಾಯಿ ಕಿವಿಗಳೆನ್ನದೆ
ಕೈಯಿಥ್ಥಮಾ ಮಾಡಿ,
ಊರು ಬಾಗಿಲು ಮುಂದೆ
ಹೋರಿ ಕೋಣಗಳ ಕಡಿದು,
ನೂರಾರು ಯುದ್ಧಗಳಲ್ಲಿ
ರಕ್ತದ ಕೋಡಿಗಳನ್ನೆ ಹರಿಸಿ,
ಸಮುದ್ರ ಮೈಯಲ್ಲಾ
ಉಪ್ಪು ಮಾಡಿದೆ.

ಕತ್ತಲು
ಕಳ್ಳರ ಜತೆಗೂಡಿ
ವನ ವನ್ಯಗಳ ನಾಶ ಮಾಡಿ,
ಬ್ಯಾಂಕುಗಳ ಲೂಟಿ ಮಾಡಿ,
ರಜೆ ಇಲ್ಲದೆ ಕೂದಲು ಕೆರೆವ
ಕ್ಷೌರಿಕರ ಬಿಟ್ಟಿ ಗುಲಾಮರಾಗಿ,
ಕುಲುಮೆ ಪೀರುಸಾಬನ
ಪುಪ್ಪುಸದ ಉರಿಗೆ
ರಕ್ತದೊತ್ತಡ ಏರಿಸಿಕೊಂಡು
ತೀರ ಸಣಕಲಾಗಿ
ಸಾರ್ವಜನಿಕರ ಆಸ್ಪತ್ರೆಗಳಲ್ಲಿ ಸಿಗುವ
ಗುಳಿಗೆ ನುಂಗಿ
ಸೂರತ್‌ನಲ್ಲಿ ಇಲಿಯಾಗಿ
ಪಿಲಿಪಿಲಿ ಒದ್ದಾಡಿದೆ.

ಅಪರೂಪಕ್ಕೊಮ್ಮೆ
ಅಡುಗೆ ಕೋಣೆಯಲ್ಲಿ
ಕೋಮಲ ಹೆಣ್ಣುಗಳ ಜತೆ
ಕಣ್ಣೀರ ಸುರಿಸಿ,
ಮಕ್ಕಳ ಜತೆ
ಜಾಮನ್ನ ಬ್ರೆಡ್ಡಿಗೆ ಹಚ್ಚುವಾಗ
ಕಚಗುಳಿಯಾಗಿ,
ಆಯುಧ ಪೂಜೆ ದಿನ
ಸಿಂಗರಿಸಿಕೊಂಡು
ಗೆಳೆಯರ ಜತೆ ಹರಟೆ ಹೊಡೆದು,
ಇತ್ತೀಚೆಗಷ್ಟೆ
'ಓಂ' ಸಿನಿಮಾದಲ್ಲೂ
ಕಾಣಿಸಿಕೊಂಡಿದ್ದೆ.

ನಾನೊಂದು ಕತ್ತಿ.

# ಓ ಹಿಮಾಲಯ

ಮಹಾಸಾಗರ ಟಿತೀಸ್ ಒಮ್ಮೆ
ತುಂಬಿದ ನಕ್ಷತ್ರ ಮಂಡಲ
ನಂತರ ಚೀರಿತು ಉಲಿಯಿತು
ಚಳಿಗೆ ಹಿಮದ ಬಲೆಗೆ.

ಪುಟಿಯಿತು ಎತ್ತರದಲಿ
ಹಾರಾಡುವ ರೆಕ್ಕೆಗಳೋ
ಬಿಳಿ ಮೋಡ ಹಕ್ಕಿಗಳೋ
ಬಣ್ಣ ಸಾವಿರ ಸಾವಿರ...

ಆಕಾಶದ ಅಲ್ಲಿ ಮೋಡಗಳಾಚೆ
ತಂಪು ಕಿರಣಗಳ ತಾರೆ;
ಹಿಮಕುಂಡಲ ಮಾನಸ ಸರೋವರ
ನಡುವೆ ಪಿಸು ಮಾತು ಮೌನ!

ಕೋಡು ಕೋಡು ಮುಖ ಅಲ್ಲಿ
ಹಿಮಾಲಯದ ಹಿಡಿ ಮುಗಿಲಲ್ಲಿ –
ಜಾರಿದ ಶಶಿಕಿರಣಗಳು
ಸಾಗಿವೆ ತಂಪೇರಿ ತಪ್ಪಲೆಲ್ಲ.

ನೀಳ ಮೂಗು ಸೇಬಾ ಗುಲಾಬಿ
ಕುಂಕುಮ ಹೂವು ಕಾಶ್ಮೀರಾ
ಹೊಳೆವ ಕಿರಣ ಅವಳಾ ಕೆನ್ನೆ
ಮಂಜಿನ ಮಣಿಗಳೆ ಅವಳಾ ಪಾದ.

ನಾಕು ಕಾಲಿನ ನಾಕು ಅಲ್ಲಿ
ಬೇಸಿಗೆ ಬುದು ಬುದು ಗದ್ದೆಯಲ್ಲಿ
ಎದ್ದು ನಿಂತ ಎದೆಗಳ ಹಸಿರು
ನಡುವೆ ಹರಿವಾ ಝರಿಗಳು.

ರಂಗು ರಂಗು ಚಿಗರೆ ಪುನುಗು
ಸಲೀಮಲಿ ಗಡ್ಡದಲಿ ಗೂಡು ಕಟ್ಟಿ
ನೇತಾಡುವ ಹಕ್ಕಿಗಳ ಕೊಕ್ಕುಗಳು.
ಮೇಲೆ ಹಿಮ ಮಾನವನ ಹೆಜ್ಜೆಗಳು.

ಪಶ್ಚಿಮದ ಕಡೆ ವಾಲಿದಾ ಮರಗಳು,
ಉಣ್ಣೆ ಮೈ ಚರ್ಮದಾ ಕುರಿಗಳು;
ಕೊರಕಲು ಹಿಮಾಲಯ ಶಿಖರಗಳು
ನಡುವೆ ಅತ್ತು ಹರಿವಾ ನದಿಗಳು.

ಹುಕ್ಕಾ ಹೀರಿ ಸೊಕ್ಕೇರಿದ ಕಣಿವೆ
ಅಡಗಿ ಕುಳಿತಿದೆ ಮೋಡಗಳ ನಡುವೆ
ಕೇಳುತ್ತಿದೆ ಗಂಡನ್ಯಾರು ಎನಗೆ.... ?
ಹಿಮಾಲಯ ಓ ಹಿಮಾಲಯ.

# ಕವಿತೆ

ಮುಖವಿಲ್ಲದೆ ಮೋಡಗಳ ಮೇಲೆ
ಹೆಪ್ಪುಗಟ್ಟಿ ನಾ ಮಲಗಿದ್ದಾಗ -
ಸಾವಿನಿಂದ ತಪ್ಪಿಸಿಕೊಳ್ಳಲಾಗದ
ಸೈತಾನರಿರುವ ನಗರದಲ್ಲಿ
ಒಂದೇ ಗದ್ದಲ -
ಮೋಡಗಳ ಸರಿಸಿ ನೋಡುತ್ತೇನೆ
ಕೆಳಕ್ಕೆ.
ಹರಡಿಕೊಂಡಿದ್ದಾಳೆ
ಕಾವ್ಯ ಮೌನವಾಗಿ,
ಬಾವಲಿಗಳ ಕಣ್ಣುಗಳಲ್ಲಿ;
ತುಡಿಯುವ ಹೃದಯಗಳಲ್ಲಿ,
ಕುದಿವ ಗರ್ಭದ ಬಣ್ಣಗಳಲ್ಲಿ,
ಮಕ್ಕಳ ಕಣ್ಣು;
ಕಾಮನ ಬಿಲ್ಲುಗಳಲ್ಲಿ
ಮಲಿನ ನದಿಗಳ ನಿಟ್ಟುಸಿರಿನಲ್ಲಿ
ಕತ್ತಲು ಕುಡಿದು
ಬಾಯ್ತೆರೆದುಕೊಂಡ ಕ್ಷುದ್ರಾತಿಕ್ಷುದ್ರ
ರಾಶಿಗಳಲ್ಲಿ.
ಮೌನವಾಗಿ ನೇಣುಹಾಕಿಕೊಳ್ಳಲೆಂದೆ
ಗೋಣು ಬೆಳೆಸಿಕೊಂಡ ಪಕ್ಷಿಗಳಲ್ಲಿ,
ನೆಲದ ಹಾಳೆಗಳ ಮೇಲೆ
ಗುರುತುಳಿಸ ಬಯಸದ
ಗುಲಾಬಿಗಳಲ್ಲಿ,
ನಕ್ಷತ್ರಗಳು ಚೆಲ್ಲುವ ಕರಕು ಬೀಜಗಳಲ್ಲಿ,
ಖುಷಿಯಾಗಿ ಅರಳಿಕೊಳ್ಳುವ
ಗೋರಿಗಳಲ್ಲಿ.
ಮನುಷ್ಯ-ಮನುಷ್ಯರ
ಮಧ್ಯ ಸ್ಪಂದನವಿಲ್ಲದ
ಈ ಗ್ರಹದಲ್ಲಿ.

•

# ಈ ಭೂಮಿ

ಈ ಭೂಮಿ ನೀಲಾಕಾಶ
ವಾಯುಮಂಡಲ ಇದರ ಮೆದುಳು
ಕುದಿವ ಕೋರ್ ಕಣಗಳು
ಖನಿಜ ನಿಗೂಢ ಗೂಡುಗಳು.

ಮಿಂಚುವ ಬೆಳಕು ಗಾಳಿ
ಮೇಲೆ ಹಾರುವ ಮೋಡಗಳು
ಮಳೆ ನದಿ ಸಾಗರ
ಉಕ್ಕುವ ಜೀವ ರಶ್ಮಿ.

ವೈರಸ್, ಬ್ಯಾಕ್ಟೀರಿಯ
ನೆಲಕ್ಕೆ ಕಾಲೂರಿ ಮೇಲೆರಿದ್ದು,
ಹೂಬಳ್ಳಿಗಳು ಸುತ್ತಿಕೊಂಡು
ಹಿಮಾಲಯ ಹಬ್ಬಿ ನಡೆದಿದ್ದು.

ಮೀನು ಕಪ್ಪೆಯಾಗಿದ್ದು,
ರೆಕ್ಕೆ ಮಾಡಿ ಮೇಲಾರಿದ್ದು,
ಡೈನಾಸಾರ್ ಉರುಳಾಡಿದ್ದು,
ಜಿರಾಫೆ ಗೋಣು ಚಾಚಿದ್ದು –

ಸುತ್ತುವ ಸೂಪರ್ ಸಾಸರ್‌ಗಳು
ಮಿನುಗಿ ಜಾರುವ ನಕ್ಷತ್ರಗಳು
ಬಾಯ್ತೆರೆದು ಕಾದಿರುವ
ಬ್ಲಾಕ್‌ಹೋಲ್ ಸ್ಟಾರ್‌ವಾರ್‌ಗಳು.

ಅಶಾಶ್ವತ ದೇಹಗಳು,
ಶಾಶ್ವತ ತೇಜಪುಂಜಗಳು,
ಗಾಳಿ ನೀರು ನೀಲಾಕಾಶ
ಈ ಭೂಮಿ ಈ ಭೂಮಿ. •

# ಹುಟ್ಟೆ ಇಲ್ಲ ಸಾಯುವುದಕ್ಕೆ

ಹುಟ್ಟಿದ ಎಲ್ಲರಿಗೂ ಗೊತ್ತೆ ಇರುವುದಿಲ್ಲ
ಸಾಯುವವರೆಗೆ.
ಸತ್ತ ಮೇಲೆ ಇಲ್ಲವೇ ಇಲ್ಲ ಕೇಳುವುದಕ್ಕೆ,
ಸುಟ್ಟು ಬೂದಿ ಎರೆಚುವವರು ವಾರಸುದಾರರು ಬೇಕಾಬಿಟ್ಟಿ.
ಆಳಗುಂಡಿ ಮಾಡಿ, ಮೇಲೆ ಕಲ್ಲು ಬಂಡೆ ಹಾಸಿ, ಅರಳೆ ಬೀಜ ಚೆಲ್ಲಿ
ಮುಚ್ಚಿ ಬಿಡುತ್ತಾರೆ ಭೂಮಿ ಉಸಿರಾಡದಂತೆ,
ಶವಪೆಟ್ಟಿಗೆ ಸ್ವಲ್ಪವೂ ಅಲುಗದಂತೆ
ಮೊಳೆ ಹೊಡೆದುಬಿಡುತ್ತಾರೆ ಮೂತಿಗೆ.
ಹಾಸು ಕಲ್ಲು, ಮರ ಚಾವಣಿಗಳ ಮೇಲೆ ಶವಗಳ ಎಸೆದು
ಆಹ್ವಾನಿಸುತ್ತಾರೆ ಅತಿಥಿಗಳನ್ನು ಬದುಕಿನ ಕಡೆಗೆ.
ಸತ್ತ ಪತಿ ಪಕ್ಕ ಪತ್ನಿಯ ಕೂರಿಸಿ
ಸದ್ದುಗದ್ದಲ ಮಾಡಿ ಸ್ವರ್ಗದ ಬಾಗಿಲು ತೆರೆಸುತ್ತಾರೆ
ಮಹಾನುಭಾವರು.
ಸಾವಿರ ತಲೆಗಳ ಬಲಿಕೊಟ್ಟ ಮೇಲೆ
ಎದ್ದು ನಿಂತಿತು ಸುಂದರ ತಾಜಮಹಲು.
ಮಮ್ಮಿ ಮುಖಗಳ ನೋಡಬೇಕು
ಮಡಿಚಿಟ್ಟಿರುವ ಇಜಿಪ್ಟಿನ ಚಾಪೆಗಳ ತುಂಬ.

ನಾವು ಶವಗಳ ಜೊತೆ ನೆಲದಲ್ಲೆ ಮಲಗಿಕೊಂಡವರು
ಹುಟ್ಟದೆ ಉಳಿದುಕೊಂಡವರೆ ಮೇಲು
ಸತ್ತರೂ ಸುಡುವುದಿಲ್ಲ ಸೌದೆ ಇಲ್ಲದೆ,
ಆಳ ಗುಂಡಿಯೂ ತೋಡುವುದಿಲ್ಲ ಶಕ್ತಿ ಇಲ್ಲದೆ,
ಶವ ಪೆಟ್ಟಿಗೆಗಳು ಬರುವುದೆ ಇಲ್ಲ ಹೆದರಿ ಹತ್ತಿರಕ್ಕೆ
ಹದ್ದು ನರಿ ಮುಟ್ಟುವುದೆ ಇಲ್ಲ ರಕ್ತ ಮಾಂಸ ಇಲ್ಲದೆ.
ಹುಟ್ಟಿದ ಎಲ್ಲರಿಗೂ ಗೊತ್ತೆ ಇರುವುದಿಲ್ಲ
ಸಾಯುವವರೆಗೆ.
ನಮಗೆ ಹುಟ್ಟೆ ಇಲ್ಲ ಸಾಯುವುದಕ್ಕೆ.

●

# ಮುಗಿಲು

ರೆಕ್ಕೆ ಬಿಚ್ಚಿ ಹಾರುವ ಮುಗಿಲು
ಬೆಳ್ಳಗೆ ಎಷ್ಟೊಂದು ಸುಂದರ!
ಉರುಳಾಡುವ ಕಪ್ಪು ಕಾರ್ಮೋಡ
ಕಪ್ಪಾಗಿ ಎಷ್ಟೊಂದು ಭಯಂಕರ!

ಹೆಣೆದುಕೊಳ್ಳುವ ಬಣ್ಣಗಳು ಏಳಾದರು
ಗರಿಗೆದರುವ ರೆಕ್ಕೆಗಳು ನೂರಾರು,
ಬಾನಲ್ಲಿ ಮೂಡುವ ಚಿತ್ರಗಳು
ಮಿನುಗುವ ಚುಕ್ಕೆಗಳು ಸಾವಿರಾರು.

ಕಣ ಕಣ ಕೂಡಿ ಹೌಹಾರಿ ಹಗುರವಾಗಿ
ಮೇಲೆ ಹಾರಿ ಎರಡೊಂದಾಗಿ ನಡೆಯೋದು
ನೆಲಕ್ಕೆ ಕಾಲಿಟ್ಟು ಮುಗಿಲು ಮೋಡವಾಗಿ
ಹನಿಯೂದು ಪಟಪಟನೆ ತಳ ಜವ್ವನೆ.

ಬಿಳುಪು ಕಪ್ಪಾಗಿ ಕೆಂಪಾಗಿ
ನರನರವು ಹರಿದಾಡಿ ಓಡಾಡಿ
ಹನಿ ತೊಟ್ಟಾಗ ಮಂಜು ಹನಿ
ಜಡಿ ಮಳೆಯಾಗುವುದು ಒಂದೇ ಸಮನೆ.

ನದಿ ಓಡುವುದು ಹೂವು ಅರಳುವುದು
ಮುಗಿಲು ಗುಡ್ಡದ ಮೇಲೆ ಜಾರುವುದು
ಕೋಪಗೊಂಡ ಮುಗಿಲುಗಳು ಸಿಡಿದು
ಆಲಿಕಲ್ಲು ಮಳೆ ಪಟಪಟನೆ ಸುರಿಸುವುದು.

ಹಾರಾಡುವ ಹಂಸಗಳ ಮೇಲೆ
ಕಪ್ಪಾದ ಹೊಗೆ ರಸಾಯನ ಚೆಲ್ಲಿ
ಮೋಡಗಳ ಸಿಡಿಸುವುದು
ನಮ್ಮ ಚರಿತ್ರೆ ನಾವೇ ಬರೆದುಕೊಳ್ಳುವುದು....

●

# ನಾವೇ ಬೆಂಗಳೂರಿನವರು

ನಿಜಕ್ಕೂ
ಹೊಲೆ ಮಾದಿಗರೆಂದರೆ
ಸಿಗುವುದಿಲ್ಲ ಮನೆ ಯಾರಿಗೂ;
ಬೇಕಾದರೆ ಮನೆ
ನಾವಾಗಬೇಕು
ಗೌಡೊ, ನಾಯಿಡೊ, ಕನಿಷ್ಠ ಬೋಯಿಡೊ.
ತುಳಸಿ, ಗೌರಿ-ಗಣೇಶ, ಅಮಾವಾಸೆ, ತಿಥಿ, ಪಕ್ಷ
ಕೊನೆಗೆ ನೀಘ ತುಂಬುವ.ಹಬ್ಬವಾದರೂ ಸರಿ,
ತಳಕು ಬೆಂಗಳೂರನ್ನೆ ಅನುಸರಿಸಿ
ಮಾಡ್ರನ್ ದೇವರುಗಳನ್ನೆ ಮೆಚ್ಚಿಸಿ
ಅಂದುಕೊಳ್ಳುತ್ತೇವೆ ಒಂದು ಕ್ಷಣ
ನಾವು! ಯಾರಿಗೇನು ಕಮ್ಮಿ
ಬಸ್ಸಿನಲ್ಲೋ ಕಛೇರಿಯಲ್ಲೊ
ಜಾತಿ ಅಸ್ಪೃಶ್ಯತೆ ಆಚರಿಸಿದಾಗ
ಅಡಗಿಕೊಳ್ಳುತ್ತೇವೆ ಗೂಸಂಬಿಗಳಂತೆ
ಸಾಯಲು ಸಿದ್ಧರಿಲ್ಲದ ನಾಮರ್ದಾಗಳು ನಾವು.
ಸಾಧ್ಯವಾದರೆ ಒಂದು ನೂಲು ಅಡ್ಡಡ್ಡ ಧರಿಸಿ
ವಿಭೂತಿ ಬಳಿದು, ಮೇಲೆ ತ್ರಿಶೂಲ ಸಿಕ್ಕಿಸಿ
ಫುಟ್‌ಪಾತಿನ ದೇವರುಗಳನ್ನೆ ಮನೆ ತುಂಬ ನಿಲ್ಲಿಸಿ,
ಅಂಬೇಡ್ಕರ್ ಫೋಟೊ ಹಿಂದಕ್ಕೆ ಸರಿಸಿ,
ಅಂತರ್‌ಜಾತಿ ವಿವಾಹ ಆದವರ
ಅಪಮಾನಗೊಳಿಸಿ,
ಎಲ್ಲಕ್ಕೂ ಬ್ರಾಹ್ಮಣರನ್ನೇ ಕರೆಸಿ
ದಿನವೆಲ್ಲ ಶಾಖಾಹಾರಿಗಳಾಗಿ
ಜಾತಿಯಿಂದಲೆ ರಾತ್ರಿ ಶಾಸಕರಾಗಿ
ಎಡಕ್ಕೂ ಬಲಕ್ಕೂ ವಿದ್ಯಾಕೇಂದ್ರಗಳ ತೆರೆಸಿ
ಹಣ ಕೊಟ್ಟವರಿಗೆ ಪಟ್ಟಾ ಕೊಟ್ಟು,
ಎಲ್ಲಕ್ಕೂ ಮಾನ ಮರ್ಯಾದೆ ಒತ್ತೆ ಇಟ್ಟು,

ಮಾತು ಮಾತಿಗೂ ಮುಷ್ಕರ, ಧರಣೆ ಹೂಡಿ
ಜುಬ್ಬಾ ಶಲ್ಯ ಕನ್ನಡಕ ಧರಿಸಿ,
ತಮ್ಮ ಚೇಲಾಗಳಿಂದ
ಹಾರ ತಾವೇ ಹಾಕಿಸಿಕೊಂಡು,
ಅಂಬೇಡ್ಕರ್ ಪ್ರತಿಮೆಗೆ ಹಾಲ್ಕೊಹಾಲ್ ಕುಡಿಸಿ
ನಮ್ಮ ಮೇಲೆ ನಾವೇ ಬಹಿರ್ದೆಶೆ ಮಾಡಿಕೊಂಡು
ಬದುಕುತ್ತಿದ್ದೇವೆ ಉದ್ಯಾನ ನಗರಿಗಳು,
ನಾವೇ ಬೆಂಗಳೂರಿನವರು.

---

ಸಾಯಲು ಸಿದ್ಧವಾಗಿರುವ ಯಾವುದೆ ಜನಾಂಗ ಆತ್ಮಗೌರವದಿಂದ ಬಾಳುವುದು.

- ಡಾ॥ ಅಂಬೇಡ್ಕರ್

# ಹಿಡಿಗಾತ್ರದೆದೆಯಲ್ಲಿ

ಬೆಳಗಿನ
ಅಂಗಳದಲ್ಲಿ
ಆಡಿಕೊಳ್ಳುತ್ತಿದ್ದಾರೆ ಮಕ್ಕಳು
ಕೋಟಿ ಮೈಲಿಗಳಿಂದ ಧಾವಿಸಿ ಬಂದು.
ಜಗವು ತೆವಳುತ್ತಿದೆ
ಹಿಡಿಗಾತ್ರದೆದೆಯಲ್ಲಿ.
ಅಕ್ಷರಗಳು ಹಾರಿ ಹೋಗಿವೆ
ರೆಕ್ಕೆ ಮೂಡಿ ಮುಂಚೆಯೆ
ಪ್ರಿಯತಮನ ಹೃದಯದಿಂದ. ಜೊತೆಗೆ
ಧ್ವನಿ ಕೂಡ ದಶ ದಿಕ್ಕುಗಳಿಗೆ.
ಅಲ್ಲೆ ಕಾಯುತ್ತಿವೆ ದಾರಿಗಳು
ವಲಸೆ ಹೋದ ಹಕ್ಕಿಗಳು ಮರಳಿ ಬರಲೆಂದು.
ಬಿಸಿಲು ಮಾಡುವ ದಾಳಿಯಿಂದ
ನೆರಳು ಕೆಳಗೆ ಸಿಕ್ಕಿ ನಲುಗುತ್ತಿದೆ.
ಮಲ್ಲಿಗೆ ವಾಸನೆಯಿಂದ ಮತ್ಸರಗೊಂಡಿದೆ
ಮಣ್ಣಿನ ಮನ.
ಹೆಣ್ಣಿನ ಸೊಂಟದಲ್ಲಿ
ಸಿಕ್ಕಿಕೊಂಡ ಕರವಸ್ತ್ರ
ಸೀನುತ್ತಿದೆ ಸೆಂಟಿನಿಂದ.
ಹುಡುಗಿಯ ಕೆನ್ನೆ ಸೋಕಿದ ಕನ್ನಡಿ
ಅಳುತ್ತಿದೆ ತನ್ನ ಕೆನ್ನೆ ನುಣುಪಿಲ್ಲವೆಂದು.
ಟೆಲಿಫೋನ್ ತಂತಿಗೆ
ದೂರ ದೂರದವರೆಗೆ ಜೋಡಿಸಿವೆ ಸುದ್ದಿಯ ತುಟಿಗಳು.
ಸಾಯಂಕಾಲದ ಹೆಜ್ಜೆಗಳು
ದಡದಡನೆ ಓಡುತ್ತಿವೆ ದಾರಿಗಳನ್ನೊತ್ತು
ಊರಿನ ಕಡೆಗೆ.
ರಾತ್ರಿ ಕುಳಿತಿದೆ ಆಕಾಶದಲ್ಲಿ, ಹರಡಿಕೊಂಡ
ನಕ್ಷತ್ರಗಳ ಮಾಲೆ ಕಟ್ಟುತ್ತ.

ಹೆಜ್ಜೆಗಳನ್ನ ಎಣಿಸಿ ಎಣಿಸಿ
ಸವೆದೋಗಿದ್ದೆ ದಾರಿ.
ಮತ್ತೆ
ಬೆಳಗಿನ ಅಂಗಳದಲ್ಲಿ
ಆಡಿಕೊಳ್ಳುತ್ತಿದ್ದಾರೆ ಮಕ್ಕಳು
ಕೋಟಿ ಮೈಲಿಗಳಿಂದ ಧಾವಿಸಿ ಬಂದು.
ಜಗವು ತೆವಳುತ್ತಿದೆ
ಹಿಡಿಗಾತ್ರದೆದೆಯಲ್ಲಿ.

# ಏಯ್ಡ್ಸ್ ತುಂಬಿದ ಟ್ರಕ್ಕುಗಳು

ಇಳಿದು ಬರುತ್ತವೆ
ರಾಷ್ಟ್ರೀಯ ಹೆದ್ದಾರಿಗಳ ತುಂಬ
ಏಯ್ಡ್ಸ್ ತುಂಬಿದ ಟ್ರಕ್ಕುಗಳು.
ಋತುಗಳನ್ನೇ ಬಳಿದುಕೊಂಡು,
ರಾಜ್ಯಗಳನ್ನೆ ದಾಟಿಕೊಂಡು,
ನದಿ ಬೆಟ್ಟಗಳನ್ನೇ ಹೊತ್ತು
ಮಧ್ಯ ಮಧ್ಯ ಗರಿ ಮುರಿ ಡಾಬಾಗಳಲ್ಲಿ
ಸುಧಾರಿಸಿಕೊಂಡು.
ಹಣೆಯ ಮಣಿಗಳ ನೆಲವೆಲ್ಲ ಕಾರಿ
ಬೀರು-ಬ್ರಾಂದಿ ತಣ್ಣಗೆ ಹೀರಿ
ಈರುಳ್ಳಿ ಮೆಣಸಿನಕಾಯಿ ನಂಜಿಕೊಂಡು,
ನೀರು ಸಿಕ್ಕರೆ ಆಹ್ಲಾದಾಯಕ ಈಜಾಡಿ,
ಒಂದು ಎರಡು ಮೂರು
ರೇಡಿಯೆಟರುಗಳ ತಂಪು ಮಾಡಿ
ಕಣ್ಣುಗಳ ತುಂಬ ಸಿಗ್ನಲ್ಲುಗಳ ಸಿಗಿಸಿಕೊಂಡು
ಕೆಂಪು ಬೀದಿಗಳ ತುಳಿದುಕೊಂಡು
ಎಲ್ಲವನ್ನೂ ಮೇಲೆ ಎಳೆದುಕೊಂಡು
ಪೆಟ್ರೋಲ್ ಟ್ಯಾಂಕಿನಲ್ಲೆ ಉರಿದು
ತಾರು ಡೀಸಲು ಸುರಿದು ಕೊಂಡು
ಗಲ್ಲಿ ಗಲ್ಲಿ ಬೀದಿ ಬೀದಿ
ಎಲ್ಲೆಲ್ಲೂ ಡೆಲಿವರಿ ಕೊಟ್ಟು,
ಹಗಲು ರಾತ್ರಿ ಓಡುತ್ತ
ನಟ್ಟು ಬೋಲ್ಟುಗಳ ಎಲ್ಲೆಲ್ಲೊ ಕಳಚಿಟ್ಟು,
ಎಲ್ಲಾ ದೇವರುಗಳಲ್ಲೂ ಮೊರೆಯಿಟ್ಟು
ತುಸುವೆ ತಪ್ಪಿದರು
ಅಕ್ಕಪಕ್ಕದವರನ್ನೆ ಗುದ್ದಿಕೊಂಡು, ಗುದ್ದಿಸಿಕೊಂಡು,
ಕೈಕಾಲು ಮುಸಿಡಿ ಮುರಿದುಕೊಂಡು
ನೆಲದ ಮೇಲೆ ಮಲಗಿಕೊಂಡು

ಹಿಂದೆ ಮುಂದೆ ಸಿಗ್ನಲ್ಲಾಕಿ
ರಕ್ತ ಕುಂಡಿಯ ಸವರುತ್ತ
ಸಾವಧಾನ ಎಲ್ಲವನ್ನೂ ತೊಳೆದುಕೊಂಡು
ಹೊರಡುತ್ತವೆ ಮತ್ತೆ ಎದ್ದು ನಿಂತು
ರಾಷ್ಟ್ರೀಯ ಹೆದ್ದಾರಿಗಳ ತುಂಬ
ಎಯ್ಡ್ಸ್ ತುಂಬಿದ ಟ್ರಕ್ಕುಗಳು.

●

# ಇನ್ನೂ ಬೆಳಕು ಮೂಡಿಲ್ಲ ಮೂಡಣದಲ್ಲಿ

ಆಕಾಶದಂಗಳದೊಳು,
ಮಡುಗಟ್ಟಿದ ಮಬ್ಬು –
ಮಿನುಗು ತಾರೆಗಳ ತೆಪ್ಪ ಸಾಗಿದೆ
ಸೋತ ಬೆನ್ನುಗಳ ಮೇಲೆ.

ಅದೊ ಕಿವಿಕೊಟ್ಟು ಕೇಳಿ :
ಗೆಜ್ಜೆ ಕೋಳಿ ಕೂಗುತ್ತಿದೆ ಆಕಾಶದಲ್ಲಿ.
ಏಳಬೇಡಿ ನಸುಕಿನಲ್ಲಿ,
ಇನ್ನೂ ಬೆಳಕು ಮೂಡಿಲ್ಲ ಮೂಡಣದಲ್ಲಿ.

ಗೆರೆಗಳಾಕಿದೆ ದಿಕ್ಕುಗಳಿಗೆ;
ದಾಟಬೇಡಿ ಲಕ್ಷ್ಮಣರೇಖೆ;
ತೋರಿಸಿದರೆ ಸಾಕು ದ್ರೋಣರಿಗೆ;
ನಿಮ್ಮ ಹೆಬ್ಬೆರಳುಗಳನ್ನೆ ಕತ್ತರಿಸಿಕೊಳ್ಳುವರು.

ಇಲ್ಲಿ ನೋಡಿ ಸೊಗಸಾದ ಹೂವುಗಳು;
ನಗುತ್ತಿವೆ ಬಂಡೆಗಳ ಮೇಲೆ.
ಇರಲೇ ಬೇಕು ಇವು ಪಾದಗಳ ಮೇಲೆ;
ಬಿಡಿಸಿಕೊಳ್ಳಿ ನಿಧಾನವಾಗಿ ದೇವರಿಗೆ.

# ಸರಕ್ಕಾರಕ್ಕೊಂದು ಮನವಿ

ನಮ್ಮ ಹಾಗೆ ನಮ್ಮ ದೇವರುಗಳು ಕೂಡ ತೀರ ಹಿಂದುಳಿದವರು
ಎಲ್ಲಮ್ಮ, ದುರ್ಗಮ್ಮ, ವಾಲಿಗೆಮ್ಮ, ಕಾರೆಮ್ಮ, ಗಂಗಮ್ಮ
ಹೀಗೆ ನೂರಾರು ಪುಡಿ ದೇವರುಗಳು
ಬರುತ್ತಾರೆ ಹಿಂದುಳಿದ ಪಟ್ಟಿಯಲ್ಲಿ.

ಯಾರಿಗೂ ಒಂದು ತುಂಡು ಬಟ್ಟೆಯಾಗಲಿ,
ಗೇಣು ಗುಡಿಯಾಗಲಿ ಚೂರು ನೆಲವಾಗಲಿ,
ತಿಪ್ಪೆ ಕುಂಟೆಯಾಗಲಿ ಇಲ್ಲ;
ಸರಕಾರವು ಇತ್ತ ಗಮನ ಹರಿಸಿಲ್ಲ.

ಯಾವಾಗಲೊ ಒಮ್ಮೆ ತಮಟೆ ತುಡುಮಗಳ ಜೊತೆ
ಬರಿ ಕಾಲುಗಳಲ್ಲೆ ಕುಣಿಯುತ್ತಾ ಬಂದು
ಕುರಿ ಕೋಳಿಗಳ ಕೊಯ್ದು ಹೊರಟು ಬಿಡುತ್ತಾರೆ;
ನಮ್ಮ ಮೇಲೆ ಬರಿ ರಕ್ತ ಸಿಂಪರಿಸಿ
ಗೋಮಾಳ ಜಮೀನಿನ ಪಟ್ಟಾಗಳು
ವಿತರಿಸಿದಂತೆ ಸರಕಾರದವರು.

ಊರು ಕೇರಿಗಳಿಗೆ ದೂರವಿರಿಸಿ,
ಪುರುಷ ದೇವರುಗಳ ಸುತ್ತ ದೇವದಾಸಿಯರಾಗಿಸಿ,
ವಿದ್ಯೆಬುದ್ಧಿ ಕಸಿದುಕೊಂಡು ಮೂಢ ನಂಬಿಕೆಗಳಲ್ಲೆ ಮುಳುಗಿಸಿ
ಮೀಸಲಾತಿಯೂ ಪಾಲಿಸದೆ ವಂಚಿಸುತ್ತಿರುವ ಸರಕಾರಕ್ಕೆ
ನಮ್ಮ ಸಾವಿರ ಸಾವಿರ ಘನ ದಿಕ್ಕಾರಗಳು.

ಸಾವಿರಾರು ವರ್ಷಗಳಿಂದ ನಿಮ್ಮ ತುಳಿತಕ್ಕೊಳಪಟ್ಟ ನಮಗೆ
ತಿರುಪತಿ ತಿಮ್ಮಪ್ಪ, ಪುರಿಜಗನ್ನಾಥ, ಮಂತ್ರಾಲಯ
ರಾಘವೇಂದ್ರ, ಗುರುವಾಯೂರಪ್ಪರ ಆಡಳಿತದಲ್ಲಿ
ಮೀಸಲಾತಿ ಬೇಕೇ ಬೇಕು ಕಾಯಂ ಕೊಡಿಸಲೇಬೇಕು
ಅದೂ ಶೇ. 18 ಮತ್ತು ಶೇ. 7 ಕಡ್ಡಾಯ ಇರಲೇಬೇಕು.

ಒಲ್ಲೆ ಎಂದರೆ ನಿಮ್ಮ ಮೈಗಳ ಮೇಲೇರಿ,
ನಿಮ್ಮನ್ನೆ ತೇಲುಗಣ್ಣು ಮೇಲುಗಣ್ಣು ಮಾಡಿ,
ಕೈಕಾಲುಗಳ ಎಳೆದಾಡಿ, ಬಾಯಿ ಸೊಟ್ಟಗೆ ಮಾಡಿ
ಸೊಟ್ಟ ಮುಖದ ಲೊಟ್ಟೆಯರಾಗಿಸುತ್ತೇವೆ;
ಇದು ನಮ್ಮ ಉಗ್ರ ಸತ್ಯದ ಮೊದಲ ಮನವಿ
ಮತ್ತು ಕಟ್ಟೆಚ್ಚರ.

(ಇಂತಿ 33 ಕೋಟಿ ಹಿಂದುಳಿದ ಪುಡಿ ದೇವರುಗಳ ಸಹಿಗಳೊಡನೆ)

# ಗೋರಿಗಳು

ಭಾರವಾದ ಪರ್ವತಗಳ ಹೊರಲಾರದೆ
ಕಣ್ಣೀರ ತುಂಬಿ ಕೊಂಡಿರುವುದೇನೋ
ಸಮುದ್ರ.

ನದಿಯ ಕಣ್ಣುಗಳೆಲ್ಲ ಬತ್ತಿದಾಗ
ಇನ್ನಷ್ಟು ಫಲವತ್ತಾಗುವುದೇನೋ
ಭೂಮಿ.

ಚಂದ್ರನಲ್ಲಿ ಸೂರ್ಯನ ನೋಡಿದಾಗೆಲ್ಲ
ಭಯಗೊಳ್ಳುವುದೇನೋ
ಕಡಲು.

ಸೋರುವ ನಕ್ಷತ್ರಗಳ ಬೆಳಕನ್ನ
ಗುಡಿಸಲಾರದೆ ಬಿಮ್ಮನೆ ಅಳುತ್ತಿದೆಯೇನೋ
ಗಾಳಿ.

ಭೂಮಿ ಬಳಿದುಕೊಂಡ ಬಣ್ಣಗಳು
ನೀಲಿಯಾಗಿ ಮಾಸುತ್ತಿವೆಯೇನೋ
ಆಕಾಶದಲ್ಲಿ.

ಓಡುವ ಮುಗಿಲುಗಳ ಹಿಡಿದುಕೊಳ್ಳಲಾಗದೆ
ಕೋಪದ ಮೊನಚುಗಳಾಗಿವೆಯೇನೋ
ಶಿಖರಗಳು.

ತಾತ್ಕಾಲಿಕವಾಗಿ ಉಬ್ಬಿಕೊಳ್ಳುವ ಗೋರಿಗಳು
ಬಿಟ್ಟು ಹೋದ ಪರಿಸರಗಳೇನೋ
ಸತ್ತವರು.

# ಚೆಲ್ಲನಾಗುವ ಸೂರ್ಯನೆದುರು

ಉರಿಯುತ್ತಿರುವ
ನ್ಯೂಕ್ಲೀಯಾರ್ ಗೋಳದ ಮೇಲೆ
ಹರಿದ ಹಲವು ಖಂಡ
ಹಿಮಾಲಯ, ರಾಖಿ, ಆಲ್ಪ್ಸ
ಎತ್ತರಗೊಂಡ.
ಕುದಿವ ಗರ್ಭಗೆದರಿ
ಕುಸಿವ ಭೂಒಡಲು ಅದುರಿ
ಮೂಲೆ ಮೂಲೆಗೆಸೆದ
ಭ್ರೂಣಗಳ ಚೀರಾಟ –
ಇಥಿಯೋಪಿಯ, ರವಂಡಾ, ಕೋರಾಪುಟ್
ಬೋಳು ಕಾಡು
ಗಿರಿಗೂಡು ಎದೆಗಳ ಗೋಳಾಟ.
ಪುಕ್ಕ ಉದುರಿದ ನವಿಲು
ನರ್ತನಗೈಯುವಾಟ,
ಟ್ಯೂಮರ್ ಬೆಳೆದ
ಕಂಠದಿಂದ ಕೋಗಿಲೆ
ಕುಹೂ ಕುಹೂ ಕೂಗುವಾಟ,
ಮಡುಗಟ್ಟಿದ ತಿಳಿಗೊಳ
ಕೆನೆ ರಕ್ತದಲ್ಲಿ
ಹಂಸಗಳ ತೇಲಾಟ.
ಇದೆಲ್ಲ
ಕೀವು ಕಾರಿ
ಚೆಲ್ಲನಾಗುವ
ಸೂರ್ಯನೆದುರಾಟ.

# ಬಿಸಿಲಿನ ಒಂದು ತೊಟ್ಟು

1

ಬಿಸಿಲಿನ ಒಂದು ತೊಟ್ಟು
ಬಳ್ಳಾರಿ, ರಾಯಚೂರ ಬಿಸಿಲಾಗಿ
ಹಿಮಾಲಯ ನದಿಗಳ ಮರುಳಾಗಿ
ದರಬಂಗಾ, ಉತ್ತರಕಾಶಿ, ಲತೋರ, ಖಿಲಾರಿ
ಭೂಕಂಪನಗಳಾಗಿ
ಉರುಳಾಡಿದವು
ತೆಂಗಿನ ಮರಗಳಲ್ಲಿ ಗೊಂಚಲು ತಲೆಗಳು.
ಬಿದಿರು ಮೆಳೆಗಳಲ್ಲಿ ಕತ್ತರಿಸಿದ ಬೆರಳುಗಳು.
ಮುರಿದು ಬಿದ್ದಿರುವ ತಪ್ಪಲು ತೊಡೆಗಳು
ಜಪಾನ್, ಫಿಲಿಫೈನ್ಸ್
ಕಣ್ಣುಗಳು,
ಹಿರೋಶಿಮ ನಾಗಸಾಕಿ ಹುಣ್ಣುಗಳು.
ಹೀಗೆ
ವಸುಂಧರೆಯ ಬಾಳು ಚಲ್ಲಾಪಿಲ್ಲಿಯಾಯಿತು
ಪಾಂಚಾಳಿಯ ಕೂದಲಿನಂತೆ,
ಓಡಿಬಂದರು ಕಲಿಯುಗದ ಕೃಷ್ಣರು
ಹೆಲಿಕಾಪ್ಟರುಗಳಲ್ಲಿ
ಅವಳ ಸೌಂದರ್ಯವನ್ನು ಮೊಳ ಹಾಕಿ ಅಳೆಯಲು.
ದಿನ ಎರಡಾಗಲು
ಸಂಬಂಧಗಳು ಒಂದಾದವು.
ಒಳ ಪದರುಗಳಲ್ಲಿ
ಈಗಲು ಪಿಸುಮಾತುಗಳು.

2

ಅವಮಾನದ ಒಂದು ತೊಟ್ಟು
ಚೆದುರಿದ ಏಷಿಯಾಫ್ರಿಕ ಖಂಡಗಳಾಗಿ
ಅಸ್ಪೃಶ್ಯತೆ, ಅಪರ್‌ತಾಯ್ಡ್ ಊನಗಳಾಗಿ
ಗುಡಿಗಳ ಹೊರಗಿನ ಚಪ್ಪಲಿಗಳಾಗಿ

ಕೆಂಪು ದೀಪಗಳ ಭ್ರೂಣಗಳಾಗಿ
ಹಸಿವು ಅವಮಾನ ಎಲ್ಲೆಲ್ಲೂ ಹಬ್ಬಿರಲು
ಅಂಬೆವಾಡಿ ಸರ್ವೋಟ
ಬೆಳೆದು ನಿಂತವು ಮರಳುಗಾಡಿನ
ಒಯಾಸಿಸ್ ಬುಗ್ಗೆಗಳಾಗಿ.

3

ಬೆವರಿನ ಒಂದು ತೊಟ್ಟು
ಹಸಿವು ಬಡತನದ ಮೋಡಗಳಾಗಿ
ಇಥಿಯೋಪಿಯ, ರವಂಡಾ, ಕೋರಾಪುಟ್, ಕಾಲಾಂದಿ
ಗೆಡ್ಡೆ ಗೆಣಸುಗಳಾಗಿ
ಪಿಸಾ, ಪಿರಮಿಡ್ಸ್, ತಾಜಮಹಲ್,
ಐಫೆಲ್ ಗೋಪುರಗಳಾಗಿ
ವಜ್ರ ವೈಡೂರ್ಯ ಗಣಿಗಳಾಗಿ
ಉಳಿದುಕೊಂಡವು
ಉಪ್ಪು ನೀರಿನ ಚಿಪ್ಪುಗಳಲ್ಲಿ.

# ಗಂಗಾಮಯಿ ಭಕ್ತರು

ಹುಟ್ಟುತ್ತಲೆ ಹರಿಯುತ್ತಲೆ ಇರುವಳು
ಹಿಮಾಲಯ ಪುಟಿದಾಗಿಂದ
ಚೈತನ್ಯ ಕಿರಣಗಳು ಹುಟ್ಟಿ ಬಂದಂತೆ
ಬೆಳಕು ಕತ್ತಲನ್ನ ಓಡಿಸುವಂತೆ.

ಇವಳ ಮೂಲ ಸ್ವರ್ಗವೊ
ಜೀವಜನನೀ ಹಿಮದಾಯದೆಗಳೊ
ಇಳಿದುಬರುವಳು ಸಳಸಳನೆ
ಹಿಮಪಾದ ಗೋಮುಖ ಗಂಗೋತ್ರಿಯಲ್ಲಿ.

ಕೊಚ್ಚೆ ಎನ್ನುವರು ! ನೋಡಬೇಕು....
ಇವಳ ಸೊಬಗು ಸಸ್ಯಶ್ಯಾಮಲೆ
ಹಿಮ ತಪ್ಪಲಲ್ಲಿ ಅರಬೆಗಾಲಿಡುವ
ಪವಿತ್ರ ಹೆಜ್ಜೆಗಳ, ಜುಳುಜುಳು ಗೆಜ್ಜೆಗಳ....

ನಡೆವ ಹೆಜ್ಜೆಗಳ ತುಂಬ ಜೀವರಾಶಿ
ಉದ್ದಕ್ಕೂ ಹಾಸಿದ ನಾಗರಿಕ ಬುನಾದಿಗಳು
ದಿವ್ಯಜ್ಞಾನ ದಿಗಂತಗಳಲ್ಲಿ ನಿಂತ
ಒಂಟಿ ಕಾಲಿನ ಋಷಿಮುನಿಗಳು.

ಒಡೆದುಕೊಳ್ಳಲೆಂದೇ ಹುಟ್ಟಿದ ನೀರ್ಗುಳ್ಳೆಗಳು,
ಎತ್ತರದಿಂದ ಉರುಳಿ ಉರುಳಿ ನುಣ್ಣಗೆ ಸಣ್ಣಗೆ
ಮರಳಾಗಿ ಬಡತನವ ಬಯಲಿಗೆ ಒಪ್ಪಿಸಿ
ಹರಿವ ಜೀವದಾ ತಿರುವುಗಳು....

ಹರಿಯುವಳು ಯಮುನಾ, ಘಘ್ರಾ, ಗೋಮತಿ,
ಸೋನ್ ಹೀಗೆ ನೂರಾರು ನದಿಗಳ್ಹೊತ್ತು
ಹಾಗೆ ನೂರಾರು ಶಹರುಗಳ ಸಾವಿರಾರು
ಕಾರ್ಖಾನೆಗಳ ಕಲ್ಮಶ ಹೊತ್ತು....

ಹರಿಯುವಳು ಜುಮ್ಮನೆ ಬೆರೆತು ಬಂಗಾಳದಲ್ಲಿ

ಒಳಗೊಳಗೆ ಸಮುದ್ರದೊಳಗೆ
ಆಳದೊಳಗೆ ಪಾತಾಳದೊಳಗೆ
ಸಮಭಾಜಕ ವೃತ್ತ ದಾಟಿ ಆ ಕಡೆಗೆ....

ಗಂಗೆ ಶುದ್ಧಿ ಬಲು ಶುದ್ಧಿ ಅವಳ ಸೆರಗಿನ
ಮೇಲಿರುವ ನಾವೇ ಅಶುದ್ಧಿಗಳು,
ಗಂಗೆಯ ಉಳಿಸಿಕೊಳ್ಳದ ಪಾಪಿಗಳು
ನಾವು ಗಂಗಾಮಯಿ ಭಕ್ತರು.

# ಹಿಮಪಾದದ ಮೇಲೆ

ಡಾರ್ಜಿಲಿಂಗ್ ಕಣಿವೆಯೊಳು
ಹಿಮಪಾದ ರಿಂಗಣದೊಳು,
ನಾವಿದ್ದ ಪುಟ್ಟ ರೈಲಿನ ಹೊಟ್ಟೆ
ಕಣಿವೆಯ ಸೊಂಟದಿಂದ ಸೊಂಟಕ್ಕೆ
ಏರುತ್ತಿತ್ತು ಉಸಿರು ಬಿಡುತ್ತಾ;
ಕಣ್ಣಿಗೆ ಇಣುಕದ ಇಳಿಜಾರುಗಳು,
ಪರ್ವತ ವಯಸ್ಸಳೆಯುವ ಕೊರಕಲುಗಳು,
ಜಾರುತ್ತಿರುವ ಮುಗಿಲು ಮನೆಗಳು,
ಆಕಾಶಕ್ಕೆ ಏರುತ್ತಿರುವ ಬಳ್ಳಿಗಳು,
ಮೇಲೆ ಹೆಬ್ಬಂಡೆ ಮೋಡಗಳು.

ಸೃಧಡಿಕೊಂಡ ಅನಂತ ಬಿಳಿ ಕುದುರೆಗಳು
ಸುತ್ತಲು ಹೆಪ್ಪುಗಟ್ಟಿ
ಚಳಿಗೆ ಬೆಚ್ಚನೆಯ ಉಡುಪೇರಿಸಿ
ಪ್ರತಿಭಟಿಸುವ ಗೆಳೆಯರು.

ಕೈ ಬೀಸಿ ಕಣ್ಣು ಮಿಟುಕಿಸಿದಾಗ
ಮುಸಿ ಮುಸಿ ನಗುವ
ಆಕಾಶದ ಅಪ್ಸರೆಯರು,
ಕಲ್ಲಿನಂತ ಎದೆ, ಸಣ್ಣ ಕಣ್ಣು,
ಗುಂಡು ಮುಖ, ದೇವೇಂದ್ರನ ಬಣ್ಣ,
ದಿಂಡುಗಟ್ಟಿದ ಮೀನುಖಂಡ
ಚಳಿಯಲ್ಲೂ ನಿಶಾ ಏರಿಸುವ
ಮೈಮಾಟ.

ನೀರ್ಗಲ್ಲ ಕೊಠಡಿಯೊಳು
ತುಪ್ಪಳ ಕಂಬಳಿಯೊಳು
ಉರುಳಿದವು ದಿನಗಳು ಎರಡು ಮೂರು.
ಕಾದು ನಿಂತೆವು ಹಿಂದೆ ಸರಿಯಲು
ಅದೇ ಚಿಕುಪುಕು ತಾಣದಲಿ,
ಚಳಿಯ ಮುಂಜಾವಿನಲಿ.

ದೂರದಲ್ಲಿ, ಕಣ್ಣಿನ ಆಳದಲ್ಲಿ,
ಮುಗಿಲುಗಳ ಸಾಮ್ರಾಜ್ಯದಲ್ಲಿ,
ಕಾಂಚನಗಂಗ ನಿಂತಿರಲು ಕಾತುರದಿಂದ
ಬೀಳತೊಡಗಿದವು ಚಂದ್ರನ ಮೊಗಕ್ಕೆ
ಚಿನ್ನದ ಸೂಜಿಗಳು.
ಅಕ್ಕಪಕ್ಕದ ಶಿಖರಗಳೊ ತಿರುಗಿದವು,
ತಿಳಿ ತಾಮ್ರ ವರ್ಣಕ್ಕೆ
ಹೌಹಾರಿದ ನಾವು ನೋಡಿಕೊಂಡೆವು ಪರಸ್ಪರ
''ಬರಿ ಬೆಳಗಲ್ಲೊ ಅಣ್ಣ''
ಜಗವೆಲ್ಲಾ ಹುರುಪುಗೊಂಡಿತು.

ಚಿಕುಪುಕು ರೈಲು
ಹಾವಿನಂತೆ ಬುಸುಗುಡುತ್ತಾ
ಹಿಮಪಾದದಿಂದ ಜಾರಿದಂತೆ,
ಹೆಪ್ಪುಗಟ್ಟಿದ ಚಳಿಬಿಟ್ಟು
ಉತ್ಸಾಹ ಇಮರುತ್ತಿತ್ತು,
ಕಾಂಚನಗಂಗಾ ಎತ್ತರವಾಗುತ್ತಿತ್ತು,
ಕೊಳಚೆ ಕಲಕತ್ತ ಹತ್ತಿರವಾಗುತ್ತಿತ್ತು.

# ಭಾರತ ದರ್ಶನ

ಒಬ್ಬ ಖೈದಿ ಖಡ್ಗಕ್ಕೆ ಸಿಗದೆ
ಹಾರಿ ಹೋದರೆ ಜೇಲಿನಿಂದ,
ಇನ್ನೊಬ್ಬ ಖೈದಿ ಬರೆದ –
ಭಾರತದರ್ಶನ.
ಮತ್ತೊಬ್ಬ ಖೈದಿ ಕೂರಿಸಿಬಿಟ್ಟ
ತನ್ನ ದೇಶವನ್ನೇ
ಇಂದ್ರ ಧನಸ್ಸಿನ ಮೇಲೆ.
ದುಷ್ಟ ದುಷ್ಕರ್ಮಿಗಳು
ಬೇಲಿ ಮೇಲೆ ಹಾರಿ ಹೋದರೆ
ಅಳಿದುಳಿದ ಪುಡಿ ಖೈದಿಗಳು
ಬಂಧನಕ್ಕೊಳಗಾಗಿ
ಪೂರ್ತಿ ದಿನ ಓಡಾಡಿದರು,
ಬೆಳಕು ಕತ್ತಲಂತೆ
ಸೆಲ್ಯೂಲಾರ್ ಮಧ್ಯ ನಿಂತ
ಒಂಟಿ ಕಾಲಿನ ಧ್ವಜದಂತೆ,
ದಿನವೂ ಉರುಳಾಕಿಕೊಳ್ಳುವ
ನೇಣುಗಂಭದಂತೆ,
ಚಾಚುತ್ತಾರೆ ದುಃಖಗಳಲ್ಲೆ
ಸ್ನಾನ ಮಾಡುತ್ತ ಹೊಡೆತಗಳಿಗೆ
ಹಿಂದೆ ಬಿಟ್ಟು ಬಂದ ದಿಕ್ಕುಗಳಿಗೆ,
ಸರಳುಗಳ ಮುಂದೆ ಕಾಣುವ ಶೂನ್ಯಕ್ಕೆ,
ಕಸಿದುಕೊಳ್ಳುತ್ತವೆ ಗೋಡೆಗಳು
ಹೊಟ್ಟೆ ಬಟ್ಟೆ
ಯೌವನ ಕನಸುಗಳ,
ಎದುರಿಸಲಾರದೆ
ಕೊಳೆತ ಮನಸುಗಳ,
ಮಮ್ಮಲು ಮರುಗಿದ ಖೈದಿಗಳು
ಬೇಡಿಕೊಳ್ಳುತ್ತಾರೆ –

ಗಾಯಗೊಂಡ ಮಂಡಿಗಳಲ್ಲಿ
ಎತ್ತರ ಕಾನೂನು, ಖಾಕಿ ಬಟ್ಟೆ,
ಲಾಟಿ, ಬೂಟು, ರೂಲರು, ರೈಫಲ್ಲುಗಳ
ಒಟ್ಟಿಗೆ
ಎದುರಿಸಲಾರೆವೆಂದು,
ಏರಿಸಿ ಬಿಡಿ ಫಾಶಿಗೆ
ಯಾವಾಗಲೊ ಸತ್ತ
ನಮ್ಮ ದೇಹಗಳನ್ನ.

---

*ನೂರು ದುಷ್ಕರ್ಮಿಗಳು ಹೊರಗುಳಿಯಲಿ, ಆದರೆ ಒಬ್ಬ ನಿರಪರಾಧಿಯೂ ಒಳಗಿರಬಾರದು.

# ಕಡಲ ದಂಡೆಗಳು

ನಿರಂತರ ಅಪ್ಪಳಿಸಿ
ಕುಪ್ಪಳಿಸಿ ಮೊರೆವ
ಶಬ್ದಗಳ ಮಧ್ಯ
ನಗ್ನದೇಹಗಳ
ಕಣ್ಣಾಮುಚ್ಚಾಲೆ.

ನವ ಜೋಡಿಗಳು
ಕೈಕೈ ಹೆಣೆದು ದೀರ್ಘನೋಟ
ಬೀರಿ ನಿಟ್ಟುಸಿರಿಡುವರು.

ಹುಣ್ಣಿಮೆ ಚಂದ್ರ ತಣ್ಣಗೆ
ಹೊಳೆಯುತ್ತಾನೆ ಮೇಲೆ.

ಅಲೆಗಳ ಶಬ್ದಗಳು
ಮನಸ್ಸಿನ ದಡಗಳೊಡೆದು
ಉಬ್ಬಿ ಉಬ್ಬಿ ಧಾವಿಸುತ್ತವೆ.

ನೆಗೆದು ನೆಗೆದು
ದಡ ಸೇರಿದ ಮೀನುಗಾರರು
ಮೇಲೆ ನೋಡುವರು.

ಮಧ್ಯ ಮಧ್ಯ ಬಂಡಾಯಗಾರರು
ತೊಳೆದುಕೊಳ್ಳುವರು ಕುಂಡಿಗಳ
ದಿಗಂಬರ ಕವಿತೆಗಳಂತೆ.

ಗರ್ಭ ಜಾಲಿಸುವ
ಭೂವಿಜ್ಞಾನಿಗಳ
ಮೆದಳು ಬಿಸಿ
ಥರ್ಮಾ ಮೀಟರ್‌ಗಿಂತ
ಮುಂದೋಗಿದೆ.

ಶೀತಲದಲ್ಲಿ ಶ್ವೇತ
ನಾವೆಗಳು ಬಣ್ಣ
ಬದಲಿಸಿಕೊಳ್ಳುತ್ತಿವೆ.

ಆಕಾಶ ಸುಡುವ ಸ್ಪೈಗಳು
ಅಡಗಿವೆ ಆಳದಲ್ಲಿ
ಕಡಲ ದಂಡೆಗಳೊ
ಸಾಗುತ್ತಿವೆ ಕೋಲ್ಮಿಂಚಿನಂತೆ.

# ವಿಶ್ರಾಮ ಗೃಹ

ಬಿಸಿಲ ಹಣೆಯಲ್ಲಿ ಕರಿ ಅಕ್ಷರಗಳು.
ಗತವೈಭವ ಮೆಲುಕುತ್ತಿವೆ ಗೋಡೆಗಳು.
ಕಾಯಲು ಬಿಸಿಲು ಮಳೆ
ಮೇಲೆ ಹೆಂಚ್ಚು ಒಂದಿಂಚು.

ಮಾಲಿಯ ಸಾಣೆ ಹಿಡಿದ ಬೆರಳುಗಳಲ್ಲಿ
ಶಿಸ್ತಾಗಿ ಬೆಳೆದ ಪೌಜಿನ ದಂಡು
ಗಾಳಿಯನ್ನೂ ಬಿಡದ ಬೇಲಿಯ ಉದ್ದಂಡು.

ಗೃಹದ ಮುಂದೆ ಹಸಿರು ತಲೆಗಳು,
ಮೇಲೆ ಅಧಿಕಾರಿಯ ಕುರ್ಚಿಗಳು;
ನಡುವೆ ನೆಲ ಹೀರಿ ಅರಳಿ ನಿಂತ ಪ್ರಕೃತಿ.
ಅಧಿಕಾರಿ ಉದ್ಗರಿಸಿದ ಆನಂದ ತುಂಬಿ
'ಬಣ್ಣಗಳು ಏಷ್ಟೊಂದು ಸುಂದರ' !

ಪೃಥ್ವಿಯ ಜೊತೆ ವಿಶ್ರಾಮವಿಲ್ಲದೆ
ಓಡುವ ಜೀಪು, ಕಾರು, ಮೋಟಾರುಗಳು
ರಾತ್ರಿ ಕತ್ತಲಂತೆ ದಿನ ಬೆಳಕಿನಂತೆ
ಧಾವಿಸಿ ಬರುತ್ತವೆ ವಿಶ್ರಾಮ ಗೃಹಕ್ಕೆ.

ಕಾವಲುಗಾರ ಪರದೆ ಸರಿಸಿದ್ದೆ
ಹೊರ ಚೆಲ್ಲುತ್ತವೆ ಯೋಚನೆಗಳು
ಬಂದವರ ಬುರುಡೆ ಪೆಟ್ಟಿಗೆಗಳಿಂದ.

ಕೇಳುವ ಹಾಸಿಗೆ ಕುರ್ಚಿಗಳು
ಬೆಚ್ಚಿ ನೋವು ಚೆಲ್ಲಿ ಪರಬಾಡುತ್ತವೆ ಶಪಿಸುತ್ತ.
ಕಂಬಳಿ ಯೋಚಿಸುತ್ತಿದೆ ಮೂಲೆಯಲ್ಲಿ
ಕತ್ತಲನ್ನ ಮುಚ್ಚಿಕೊಳ್ಳುವುದು ಹೇಗೆಂದು.... ?

ಗೋಡೆಗಳ ಮಧ್ಯೆ ಒಡೆದುಕೊಳ್ಳುತ್ತದೆ
ಬಿಳಿ ಬಣ್ಣ ಏಳು ಮತ್ತೇಳು ಅಗಣಿತವಾಗಿ....
ಬೆಳಕು ಒಂದೇ ಬಣ್ಣ ಆದರೂ
ಸೂರ್ಯನ ಒಡಲಾಳ ಎಷ್ಟೊಂದು ಆಳ.... ?

# ಬೆಳಗು ಸಂಚಾರಗೊಳ್ಳುತ್ತದೆ ಚಪ್ಪಲಿಗಳಿಂದ

ಈ ಮಹಾನ್ ದೇಶದ
ಹೊಲಸನ್ನ ಹೊಲೆಯನೊತ್ತು,
ಕಕ್ಕಸನ್ನ ಮಾದಿಗನೊತ್ತು,
ಜೋಡಿ ಎತ್ತುಗಳಂತೆ
ನೊಗವನ್ನೊತ್ತು.
ವಿಧಾನಸಭೆಯಲ್ಲಿ
ಎಡ ನೀನೆಂದು, ಬಲ ನಾನೆಂದು
ತಮಗೇ ತಾವೇ ಬೆಪ್ಪಾಗಿ
ಮೂಡಲಗೆರೆಯಲ್ಲಿ
ಹೇಲು ತಿಂದ ಹನುಮರಾಗಿ,
ಚಂದ್ರಗುತ್ತಿಯ ದೇವದಾಸಿಯರಾಗಿ,
ಯಲ್ಲಮ್ಮನ ಬೆತ್ತಲೆ ಜಾತ್ರೆಯಲ್ಲಿ
ಶಿವಮೂರ್ತಿಗಳ ಬೆಂಡು ಬತ್ತಾಸುಗಳಾಗಿ,
ಗೌರ್ನಮೆಂಟ್ ಬ್ರಾಹ್ಮಣನೆಂಬ
ಎಂಬ್ಲೆಮ್ ಒತ್ತಿಸಿಕೊಂಡು,
ನ್ಯಾಯಾಲಯಗಳಲ್ಲೂ ಹಾಜರಿ ಇಲ್ಲದೆ,
ಈ ದೇಶದ ಕ್ವಾಲಿಟಿ ಹಾಳಾಯಿತೆಂಬ
ಗೂಬೆ ಕೂರಿಸಿಕೊಂಡು,
ಅಪರೂಪಕ್ಕೆ ಹೊರಗಿಟ್ಟ ಬೋಕಿಗಳಲ್ಲಿ
ಕಾಫಿ ನೀರು ಕುಡಿದು,
ಊರಿನ ಒಂದು ಊನದ ಅಂಗವಾಗಿ,
ಆಸ್ಪತ್ರೆಗಳಲ್ಲಿ ಕತ್ತರಿಸಿದ ಕರು[illegible]ಗಳಾಗಿ,
ರಸ್ತೆಗಳೆಲ್ಲೆಲ್ಲ ಸೇಂಧಿ ಅಂಗಡಿಗಳಾಗಿ,
ವಿಧಾನಸೌಧದ ಮೆಟ್ಟಿಲುಗಳಲ್ಲಿ
'ವಿಶ್ವ' 'ಆಶ್ರಯ' ಎಂಜಿಲೆಲೆಗಳಾಗಿ,
ಹಸಿರು ಕೆಂಪು ಕಾರ್ಡುಗಳಾಗಿ
ರಾಜಕೀಯ ಪುಢಾರಿಗಳ
ಇಸ್ಪೀಟ್ ಎಲೆಗಳಾಗಿ

ಸತ್ತು ಬಿದ್ದ ಹೆಣಗಳಿಗೆ
ಊರಿನ ರಣಹದ್ದುಗಳಾಗಿ,
ಕಲ್ಲು ಮೂರ್ತಿಗಳಿಗೆ
ಹಣೆಬರಹಗಳ ತೆಂಗಿನಕಾಯಿಗಳಾಗಿ,
ದಿನಾ ಊರಿಗೆ ಬರುವ
ವಾಂತಿ, ಬೇಧಿ, ಕಾಲರಾ ಪ್ಲೇಗು
ತಿಪ್ಪೆಗೆ ಸಾಗಿಸಿದಾಗ
ಬೆಳಗು ಸಂಚಾರಗೊಳ್ಳುತ್ತದೆ
ಚಪ್ಪಲಿಗಳಿಂದ,
ಈ ಲೋಕ ಹೊಲೆ ಮಾದಿಗರಿಂದ.

# ಸ್ವಾತಂತ್ರ್ಯ

ಸ್ವಾತಂತ್ರ್ಯ :
ಮಾತನಾಡಿಕೊಳ್ಳುತ್ತಾರೆ
ಎಲ್ಲರೂ
ಹಕ್ಕಿಗಳನ್ನ ಪಂಜರದಲ್ಲಿಡುತ್ತಾರೆ.
ಬರುತ್ತವೆ ಧೂಮಕೇತುಗಳು
ಉಲ್ಕೆಗಳ ಸೆಳೆದುಕೊಳ್ಳಲು
ತಮ್ಮ ಕಕ್ಷಕ್ಕೆ.
ಬೇಡ ನಮಗೆ ಯಾರ ಜೊತೆಯೂ ಯುದ್ಧ
ಬಿರುಗಾಳಿ ಎದ್ದಾಗ ಉಳಿಯುವುದು
ಗರಿಕೆ ಹುಲ್ಲು ಮಾತ್ರ.
ಮೇಲೆ ವಿಚಾರ ಒಂದು
ಅಂತರಿಕ್ಷದಲ್ಲಿ ಇನ್ನೊಂದು
ಸಿಗಬಹುದು ಹುಡುಕಿದರೆ ನೂರೊಂದು,
ಓದಿಕೊಳ್ಳಿ ನೀವು ಪಡೆದ ಸುಖ
ನಿಮ್ಮ ಹಸ್ತರೇಖೆಗಳಲ್ಲಿ.
ಬೆಳಕುಕಾರಿ ಹುಡುಕುತ್ತವೆ ನಕ್ಷತ್ರಗಳು
ಕಾಸ್‌ಮಾಸ್‌ನಲ್ಲಿ ಕಳೆದ್ಹೋದ ಆತ್ಮಗಳ
ಬಿಡುಗಡೆಯಾದ ಪಾದಗಳು ನಡೆಯುತ್ತವೆ
ಬೆಚ್ಚನೆ ಗರ್ಭದೊಳಕ್ಕೆ.

ಮಣ್ಣಿನಿಂದ ಬೇರ್ಪಟ್ಟವರು ತೊಳೆದುಕೊಳ್ಳುತ್ತಾರೆ
ತುಸುವೆ ಕೆಸರಾದರೂ....
ನಡೆದು ಬರುತ್ತವೆ ಕಾನೂನು ಮತ್ತು ಸೂಚನೆಗಳು
ಮುಚ್ಚಿಕೊಳ್ಳುತ್ತವೆ ಬೀದಿಯ ಕಪಾಟಗಳು
ಸ್ವಾತಂತ್ರ್ಯ ಸ್ವಾತಂತ್ರ್ಯ
ಮಾತನಾಡಿಕೊಳ್ಳುತ್ತಾರೆ ಎಲ್ಲರೂ....

# ನಾನಿದ್ದೇನೆ

ತಲೆಯ ಮೇಲೆ
ಹಾರುವ ಮುಗಿಲಕ್ಕಿಗಳಲ್ಲಿ,
ನೆಲದ ಮೇಲೆ
ಕಾಲು ಕೆಳಗೆ ಬೆನ್ನಿಲ್ಲದೆ
ತೆವಳುವ ಜೀವಗಳಲ್ಲಿ,
ನಾನಿದ್ದೇನೆ.

ಹಾರುವ ವಿಮಾನಗಳಲ್ಲಿ,
ಮಕ್ಕಳ ಬಲೂನುಗಳಲ್ಲಿ,
ರೇಸ್‌ಕೋರ್ಸಿನ
ಓಡುವ ಕಾಲದ ಕುದುರೆಗಳಲ್ಲಿ,
ಹಿಂದಿರುವ ಕಣ್ಣೋಟಗಳಲ್ಲಿ
ನಾನಿದ್ದೇನೆ.

ಉರಿಯುವ ಕಣ್ಣೀರ
ಮಣ್ಣು ದೀಪಗಳಲ್ಲಿ,
ಬಂಡಾಯದ
ಬಡಪಾಯಿ ಜೋಳಿಯಲ್ಲಿ,
ಹೊಟ್ಟೆ ಉರಿದಾಗ ಸೂರ್ಯನಲ್ಲಿ,
ಕರುಣೆ ತುಂಬಿದಾಗ ಚಂದ್ರನಲ್ಲಿ
ನಾನಿದ್ದೇನೆ.

ಕಣ್ಣುಗಳು ಚೆಲ್ಲಿ
ಮರಳು ಮಣ್ಣಾದ ನೆಲದಲ್ಲಿ,
ಮಿಸೈಲುಗಳು
ಢೀಡಿಕ್ಕೆಯೊಡೆದು ಚೆಲ್ಲೋಗುವ
ಭೂಮಿ ಉಸಿರಿನಲ್ಲಿ,
ನಾನಿದ್ದೇನೆ.

ಅಲ್ಲಿ ಕೊಚ್ಚಿ ಹರಿಯುವ
ಬಂಗಾಳದ ನೆರೆಗಳಲ್ಲಿ,
ತೆರೆದುಕೊಂಡ ಬಿಹಾರ-ನೇಪಾಳ
ಕಂಪನಗಳಲ್ಲಿ,
ನಾನಿದ್ದೇನೆ.

ನಾ ಎಲ್ಲಿದ್ದರೇನಂತೆ
ಉರಿಯುತ್ತಿದೆ ಕಿಡಿಯೊಂದು ನನ್ನೊಳಗೆ
ಮುಂದೆ ಭುಗಿಲ್ಲೆಂದು ಹೊತ್ತಿಕೊಳ್ಳುವ
ಆ ಘಳಿಗೆಗಾಗಿ ಎದುರು ನೋಡುತ್ತಾ....

# ಈ ಗೋಳ

ಈ ಗೋಳವನ್ನೊಯ್ಯಬೇಕು
ನನ್ನ ಸೈಕಲ್ ಸೀಟಿನ ಮೇಲೆ;
ಫುಟ್ ಬಾಲಿನಂತೆ ಇದರ
ಮೈಯಲ್ಲಾ ಆಡಿಸಬೇಕು
ನನ್ನದೆ ಕೈಚಳಕದ ಕತ್ತರಿಯಲ್ಲಿ
ಹತ್ತಾರು ಚೂರುಗಳಾದರು
ನಿಶ್ಚಿಂತೆಯಿಂದ.
ನಂತರ ಹೊಲಿಯ ಬೇಕು
ಒಂದೇ ಬಣ್ಣದ ತೊಗಲಿನಲ್ಲಿ
ಕಾದ ಸೂರ್ಯನ ಕಣ್ಣಲ್ಲಿ,
ಮೇವಿಲ್ಲದ ಕರಳು,
ದುಡಿತಕ್ಕೆ ತಾಳಲಾರದ ಉಸಿರು
ವಿಶಾಲ ನಕ್ಷತ್ರಗಳ ಮಧ್ಯ
ಹೊಳೆಯುವಂತೆ ಇರಿಸಿ
ಎಲ್ಲಾ ಗ್ರಹಗಳಿಗೂ
ತಂತಿ ಕಳುಹಿಸಬೇಕು
ನಮ್ಮದೆ ರಟ್ಟೆ
ನಮ್ಮ ತಟ್ಟೆ.

# ನೋಡುತ್ತಲೆ ಇದ್ದೇನೆ

ನೋಡುತ್ತಲೆ ಇದ್ದೇನೆ –
ಕನಸಿನ ಕಾವು ಅದುಮಿ
ಉಬ್ಬು ತಗ್ಗುಗಳು ತುಂಬಿ
ಹಬ್ಬುವ ಕ್ಷಣಗಳ
ಯೌವನದಲಿ ಬಿರಿವ
ಹಸಿರು ಪೊರೆಗಳ.

ನೋಡುತ್ತಲೆ ಇದ್ದೇನೆ –
ನನ್ನೆದೆಯ ಹಾಡುಗಳ ಅದುಮಿ
ಪರಿಮಳ ತೀಡುವ
ಮಂದ ಮಾರುತಗಳ
ಮೊಟ್ಟೆ ಹೊಡೆಯುವ
ಬಿಸಿ ಕಾವುಗಳ.

ನೋಡುತ್ತಲೆ ಇದ್ದೇನೆ –
ಹಾರುವ ಭಾವನೆಗಳ ಅದುಮಿ
ಮುಗಿಲು ತೆಕ್ಕೆಯ
ಸಾಲು ಬೆಳ್ಳಕ್ಕಿಗಳ
ಎಲ್ಲಿಂದಲೊ ಬಂದು
ಹಾರುವ ಮನ್ಮಥರ....

ನೋಡುತ್ತಲೆ ಇದ್ದೇನೆ –
ಹಾಡುವ ಆಸೆಗಳ ಅದುಮಿ
ಒಂದಲ್ಲಾ ಒಂದು ದಿನ
ಯಾರೋ ಬರುವರು
ಕೋಗಿಲೆ ಕಂಠ ಹಿಸುಕಿ
ಹಾರಿಯೇ ಹೋಗುವುದು....

ನೋಡುತ್ತಲೆ ಇದ್ದೇನೆ –
ಉಕ್ಕುವ ಪ್ರೀತಿಯ ಅದುಮಿ
ಮತ್ತೆ ಮತ್ತೆ ಚಿಗುರುವ
ಆಸೆ ಕೊನರುವ ಮೊಗ್ಗುಗಳ;
ತಂಪು ಬೀರುವ ಮಧು
ಹೀರಿ ಹಾರುವ ಚಿಟ್ಟೆಗಳ....

ನೋಡುತ್ತಲೆ ಇದ್ದೇನೆ –
ಹೊಡೆಯುವ ಚಿಗುರುಗಳ ಅದುಮಿ
ನನ್ನ ಕವಿತೆಗಳ ಸೋಲು
ಕಪ್ಪು ಕನ್ನಾಲಿಗಳ ಗೋಳು
ಒಳಗೊಳಗೆ ಸುಡುವ
ತಳಮಳಿಸುವ ನೋವ....

ನೋಡುತ್ತಲೆ ಇದ್ದೇನೆ –
ಉಸಿರು ಪ್ರಾಣಗಳ ಅದುಮಿ
ಗಕ್ಕನೆ ಉಸಿರು ನಿಲ್ಲಿಸುವ
ಸುತ್ತಲ ಕಾರ್ಯಗಳ
ನಾಳೆಯ ಆಸೆಗಳ ಸಾಯಿಸಿ
ಇಂದೆ ಕೊನೆಗೊಳ್ಳುವ ಭವಿಷ್ಯವ..

ಯಾವತ್ತೂ... ತುಟಿ ಮೀರದ ಮಾತು; ತುಟಿ ಕಚ್ಚಿ ಬದುಕುವ ಛಲ... ಅದರಾಚೆಗೂ ಹುಗಿದು ಹೋಗಿರುವುದೇನನ್ನೋ ಹುಡುಕುವ ತುಡಿತ... ಇದು ಈ ವೆಂಕಟಸ್ವಾಮಿ.

ಆದರೇಕೋ ಈ ವೆಂಕಟಸ್ವಾಮಿ ಇತ್ತ ದಸಂಸದ ತೆಕ್ಕೆಗೂ ದಕ್ಕದೆ, ಅತ್ತ ಬಂಡಾಯದ ಬಿರುಗಾಳಿಯ ಚೀರಾಟದಲ್ಲೂ ಕರಗಿ ಹೋಗದೆ ಆಮೆಯಂತೆ ಕತ್ತನ್ನು ಒಳಗೆಳೆದುಕೊಂಡು ತನ್ನೊಳಗೆ ನೋಡಿಕೊಳ್ಳುತ್ತಾ... ಅಗತ್ಯ ಬಿದ್ದಾಗ ಹೊರ ಹಾಕಿ... ಬೆಚ್ಚಿ ಬೆರಗಾಗಿ ಮತ್ತೆ ಒಳಗೆಳೆದುಕೊಳ್ಳುತ್ತಾ... ಹೀಗೆ ಬರೆದರು.

ಅವರು ಬರೆದ ಎಲ್ಲವನ್ನೂ ಗಮನಿಸಿದಾಗ ಥಟ್ಟನೆ ಸೆಳೆಯುವುದು ಪದ್ಯ ಕಟ್ಟುವಲ್ಲಿನ ಅವರ ಪ್ರಾಮಾಣಿಕ ಪರಿಶ್ರಮ, ಬೆರಗು ತರುವ ಮುಗ್ಧ ಪ್ರತಿಮಾ ಲೋಕ, ಸಮಕಾಲೀನ ಕ್ಲೀಷೆ, ಗೊಂದಲಗಳನ್ನು ಮೀರಿದ ವಸ್ತು... ವಿನ್ಯಾಸ, ಹೊರ ಒತ್ತಡಗಳನ್ನು ಹೇರು ಮಾಡದೆ ತನಗನ್ನಿಸಿದ್ದನ್ನು ಕವಿತೆ ಮಾಡುವ ಕಳಕಳಿ... ಇವು ಕಾವ್ಯದಲ್ಲಿ ತನ್ನ ತನ ಕಂಡುಕೊಳ್ಳಬಯಸುವ ಕವಿಯೊಬ್ಬನ ಜರೂರಿಗಳು. ಈ ಕಾರಣಕ್ಕಾಗಿಯೇ ವೆಂಕಟಸ್ವಾಮಿ ಮುಂದೊಂದು ದಿನ ನೆನಪಿಟ್ಟುಕೊಳ್ಳುವಂಥ ಕವಿಯಾಗುವ ಸಾಮರ್ಥ್ಯ, ಸಾಧ್ಯತೆಯುಳ್ಳವರು.

ಇವತ್ತಿನ ಬಹುಪಾಲು ಚಲಾವಣೆಯಲ್ಲಿರುವ ಕವಿಗಳ ಕಾವ್ಯಕ್ಕಿಂತ ಇವರದು ಬೇರೆಯೇ ಆಗಿ ನಿಲ್ಲುವಂಥ ಕಾವ್ಯ ಎಂದು ಧಾರಾಳವಾಗಿ ಹೇಳಬಹುದು.

—ಕೋಟಿಗಾನಹಳ್ಳಿ ರಾಮಯ್ಯ

ಕಾಡುಗುಡಿ
ಬೆಂಗಳೂರು-67



